ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಇಂದಿನಿಂದ ಬರ್ಮಿಂಗ್ ಹ್ಯಾಮ್‌ನಲ್ಲಿ ಭಾರತ-ಇಂಗ್ಲೆಂಡ್ ನಡುವಿನ ಮೊದಲ ಏಕದಿನ ಪಂದ್ಯ ನಡೆಯಲಿದೆ.

14 ಜುಲೈ, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 123 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸೃಜನ ಶೀಲತೆಯೇ ಜಗತ್ತಿನ ಸಕಲ ಪ್ರಗತಿಯ ಮೂಲ ಮಂತ್ರ » 2



ಮುಸುಕಿನ ಜೋಳ ಬದಲಿಗೆ ಪರ್ಯಾಯ ಬೆಳೆ ಬೆಳೆಯಲಿ » 3



ವೃತ್ತಿ ಧರ್ಮ ಮರೆತರೆ ರಾಜಧರ್ಮ ಪ್ರಶ್ನಿಸುವ ನೈತಿಕತೆ ಇರಲ್ಲ » 4

# ಸಂಪುಟ ವಿಸ್ತರಣೆ : ಶೀಘ್ರ ಹೈಕಮಾಂಡ್ ಭೇಟಿ

## ಆ.6ರಂದು ಮುಂಗಾರು ಅಧಿವೇಶನ : ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆ ಕುರಿತು ಹೈಕಮಾಂಡ್ ಜೊತೆ ಚರ್ಚಿಸಲು ಮೂರ್‍ನಾಲ್ಕು ದಿನಗಳಲ್ಲಿ ದೆಹಲಿಗೆ ತೆರಳುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ವರಿಷ್ಠರು ನಿಗದಿ ಮಾಡುವ ಸಮಯಕ್ಕೆ ಒಂದು ದಿನ ಮೊದಲೇ ದೆಹಲಿಗೆ ತೆರಳಿ ಚರ್ಚಿಸುವೆ. ಸಚಿವ ಸ್ಥಾನಕ್ಕಾಗಿ ಹಲವರು ಬೇಡಿಕೆ ಇಟ್ಟಿದ್ದಾರೆ. ಈ ಕುರಿತು ವರಿಷ್ಠರೊಂದಿಗೆ ಚರ್ಚಿಸಿ ಶೀಘ್ರವಾಗಿ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದ ಅವರು, ಆಗಸ್ಟ್ 6ರಂದು ಮುಂಗಾರು ಅಧಿವೇಶನ ಕರೆಯಲು ನಿರ್ಧರಿಸಲಾಗಿದೆ ಎಂದರು.

ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದೂವರೆ ತಿಂಗಳಾಗುತ್ತಾ ಬಂದರೂ ಪೂರ್ಣ ಪ್ರಮಾಣದಲ್ಲಿ ಸಂಪುಟ ವಿಸ್ತರಣೆ ಸಾಧ್ಯವಾಗಿಲ್ಲ.



ಹಿರಿಯ, ಕಿರಿಯ ಶಾಸಕರು, ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿ, ಈಗ ಅವಕಾಶ ಸಿಗದವರು ನಿರಂತರ ಒತ್ತಡ ಹಾಕುತ್ತಿದ್ದು, ಮುಖ್ಯಮಂತ್ರಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಮೂರು, ನಾಲ್ಕು ಬಾರಿ ಶಾಸಕರಾದವರು, ವಿಧಾನ ಪರಿಷತ್ ಸದಸ್ಯರು, ಶಾಸಕಿಯರು, ಜಿಲ್ಲಾವಾರು, ಜಾತಿವಾರು ಲೆಕ್ಕಾಚಾರದಲ್ಲಿ ಸಚಿವ ಸ್ಥಾನ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ನಾಯಕತ್ವ ಬದಲಾವಣೆಯ ಸನ್ನಿವೇಶದಲ್ಲಿ ತಮ್ಮ ಪರ ನಿಂತವರು, ಮುಖ್ಯಮಂತ್ರಿ ಸ್ಥಾನ ನೀಡುವಂತೆ ಬಹಿರಂಗವಾಗಿ ಹೇಳಿಕೆ ಕೊಟ್ಟವರು, ದೆಹಲಿಗೆ ತೆರಳಿ ತಮ್ಮ ಪರ ಹೈಕಮಾಂಡ್ ಮೇಲೆ ಒತ್ತಡ ಹಾಕಿದ ಕೆಲವರಿಗಾದರೂ ಸಂಪುಟದಲ್ಲಿ ಅವಕಾಶ ನೀಡಲು ಶಿವಕುಮಾರ್ ಕಸರತ್ತು ನಡೆಸಿದ್ದಾರೆ.

ಸಿದ್ದರಾಮಯ್ಯ ಬೆಂಬಲಿಗ ಶಾಸಕರು ತಮ್ಮನ್ನು ಸಂಪುಟಕ್ಕೆ ತೆಗೆದುಕೊಳ್ಳಲು ಶಿಫಾರಸ್ಸು ಮಾಡುವಂತೆ ಅವರ ಮೇಲೆ ನಿರಂತರ ಒತ್ತಡ ಹಾಕುತ್ತಿದ್ದಾರೆ. ಅವರ ಸಂಪುಟದಲ್ಲಿ ಸಚಿವರಾಗಿದ್ದು, ಈಗ ಅವಕಾಶ ವಂಚಿತರಾದ ಮಾಜಿಗಳು, ಆಪ್ತ ಶಾಸಕರ ದಂಡು ನಿತ್ಯವೂ ಅವರನ್ನು ಭೇಟಿ ಮಾಡಿ, ಮನವಿ ಮಾಡುತ್ತಿದ್ದಾರೆ. ಅಂತಹವರಿಗೆ ಸಂಪುಟದಲ್ಲಿ ಸ್ಥಾನ ಸಿಗುವಂತೆ ಮಾಡಲು ಸಿದ್ದರಾಮಯ್ಯ ಅವರೂ ಪ್ರಯತ್ನ ನಡೆಸಿದ್ದಾರೆ.

**ರಾಜ್ಯದ ಜನಪ್ರತಿನಿಧಿಗಳಿಗೆ ಮೊದಲ ಆರತಿ**

ತಿರುಪತಿಯಲ್ಲಿ ಮೊದಲ ಆರತಿ ಕರ್ನಾಟಕ ರಾಜ್ಯದವರಿಗೆ ಎಂಬ ತೀರ್ಮಾನದ ಬಗ್ಗೆದ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ತಿರುಪತಿಯಲ್ಲಿ ಮಹಾರಾಜರ ಕಾಲದಿಂದಲೂ ಮೊದಲ ಆರತಿ ಕರ್ನಾಟಕದ್ದಾಗಿದೆ. ಅಲ್ಲಿ ಪ್ರತಿದಿನ ಅಧಿಕಾರಿಯೊಬ್ಬರು ಆರತಿ ಪಡೆಯುತ್ತಾರೆ. ಆ ಅಧಿಕಾರಿ ಬದಲಿಗೆ ಇಲ್ಲಿಂದ ದರ್ಶನಕ್ಕೆ ಹೋಗುವ ಜನಪ್ರತಿನಿಧಿಗಳು, ನ್ಯಾಯಾಧೀಶರು, ಅಧಿಕಾರಿಗಳಿಗೆ, ಸಂಸದರು, ಮೇಯರ್, ತಹಶೀಲ್ದಾರ್ ಸೇರಿ ನಮ್ಮ ರಾಜ್ಯದವರಿಗೆ ಅವಕಾಶ ನೀಡಲಾಗುವುದು. ಇದು ನಿರ್ದಿಷ್ಟ ಪಕ್ಷಕ್ಕೆ ಎಂದು ಸೀಮಿತವಲ್ಲ. ಯಾವುದೇ ಪಕ್ಷದ ಜನಪ್ರತಿನಿಧಿಗಳು ಹೋದರೂ ಈ ಅವಕಾಶ ಅವರಿಗೆ ಸಿಗಬೇಕು. ಇದಕ್ಕೆ ನಿರ್ದಿಷ್ಟ ಮಾರ್ಗಸೂಚಿಗಳಿದ್ದು, ಅದರಂತೆಯೇ ಈ ಅವಕಾಶ ನೀಡಲಾಗುವುದು ಎಂದು ಹೇಳಿದರು.

### ಜು.15 ರಂದು ಕಾವೇರಿ ಮಂಡಳಿ ಸಭೆ

ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ನಾವು ರೈತರನ್ನು ಬದುಕಿಸ ಬೇಕು. ಕುಡಿಯುವ ನೀರನ್ನು ಪೂರೈಸ ಬೇಕು, ತಮಿಳುನಾಡು ಪಾಲಿನ ನೀರು ಹರಿಸುವ ಕೋರ್ಟ್ ಆದೇಶವನ್ನು ಪಾಲನೆ ಮಾಡ ಬೇಕು. ಜು.15 ರಂದು ಕಾವೇರಿ ಮಂಡಳಿ ಸಭೆ ನಡೆಯಲಿದೆ. ಆ ಸಭೆ ಯಲ್ಲಿ ನಮ್ಮ ರಾಜ್ಯದ ವಾದ ಮಂಡಿಸುತ್ತೇವೆ. ನಂತರ ತೀರ್ಮಾನವನ್ನು ತಿಳಿಸುತ್ತೇವೆ. ಕಾವೇರಿ ನೀರು ಬಿಡುವಂತೆ ಮನವಿ ಮಾಡಿ ರುವ ಬಗ್ಗೆ ಕೇಳಿದಾಗ, ಮಂಡ್ಯದವರು, ಶ್ರೀರಂಗಪಟ್ಟಣದವರು, ಜಿಲ್ಲಾ ಸಚಿವರು ಬಂದು ಭೇಟಿ ಮಾಡಿದ್ದರು. ಸಭೆ ಬಳಿಕ ತೀರ್ಮಾನ ತಿಳಿಸುತ್ತೇವೆಂದು ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

# ಸದೃಢ ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಕೊಡುಗೆ ಅತ್ಯವಶ್ಯ

## ಪತ್ರಿಕಾ ದಿನಾಚರಣೆಯಲ್ಲಿ ಶ್ರೀ ಶಂಭುನಾಥ ಸ್ವಾಮೀಜಿ ಸಾನಿಧ್ಯ



• ಪ್ರಜೋದಯ ವರದಿ

**ಅರಸೀಕೆರೆ :** ಪತ್ರಕರ್ತರು ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ ಎಚ್ಚರಿಸುವ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಸರ್ವ ಕ್ಷೇತ್ರದಲ್ಲೂ ಅಭಿವೃದ್ಧಿ ಹೊಂದಬೇಕೆಂದರೆ ಪತ್ರಿಕಾ ರಂಗದ ಕೊಡುಗೆ ಅತ್ಯವಶ್ಯಕವಾಗಿದೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಕಸ್ತೂರಬಾ ಗಾಂಧಿ ಸ್ಮಾರಕ ಸಭಾಂಗಣದಲ್ಲಿ ಭಾನುವಾರ ನಡೆದ ಜಿಲ್ಲಾ ಸಮ್ಮೇಳನ ಹಾಗು ಪತ್ರಿಕಾ ದಿನಾಚರಣೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದಷ್ಟೇ ಪತ್ರಿಕಾ ರಂಗವೂ ಪ್ರಮುಖವಾಗಿದೆ. ಖಡ್ಗಕ್ಕಿಂತ ಲೇಖನಿ ಹರಿತವಾದುದು. ಪತ್ರಕರ್ತನಿಗೆ ಯಾವ ಕಾಲಕ್ಕೂ ಬೆಲೆ ಇರುತ್ತದೆ. ದೀಪದ ಬೆಳಕಿನಲ್ಲಿ ಭಗವದ್ಗೀತೆ ಓದಬಹುದು, ಹಾಗೆಯೇ ಕಳ್ಳತನವನ್ನೂ ಮಾಡಬಹುದು. ಪತ್ರಕರ್ತರು ಸಮಾಜ ಸೇವೆಯನ್ನು ಮಾಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು, ತಾಲ್ಲೂಕಿನ ಪತ್ರಕರ್ತರಿಗೆ ಸ್ವಂತ ಕಟ್ಟಡದ ಅವಶ್ಯಕತೆ ಇರುವುದನ್ನು ಗಂಭೀರವಾಗಿ ಪರಿಗಣಿಸಿ ನೂತನ ಪತ್ರಕರ್ತರ ಭವನ ನಿರ್ಮಾಣ ಮಾಡಲು

» ನಾಲ್ಕನೇ ಪುಟದಲ್ಲಿ

# ರೇವಣ್ಣಗೆ ಸುಪ್ರೀಂ ಕೋರ್ಟ್ ನೋಟೀಸ್

## ಲೈಂಗಿಕ ಕಿರುಕುಳ ಪ್ರಕರಣ: ದೋಷಮುಕ್ತ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ

• ಪ್ರಜೋದಯ ವರದಿ

**ನವದೆಹಲಿ :** ಲೈಂಗಿಕ ಕಿರುಕುಳ ಪ್ರಕರಣ ಸಂಬಂಧ ಮಾಜಿ ಸಚಿವ ರೇವಣ್ಣ ಅವರಿಗೆ ಸುಪ್ರೀಂ ಕೋರ್ಟ್ ನೋಟೀಸ್ ಜಾರಿ ಮಾಡಿದೆ.

ಕರ್ನಾಟಕ ಹೈಕೋರ್ಟ್ ಈ ಹಿಂದೆ ರೇವಣ್ಣ ಅವರಿಗೆ ನೀಡಿದ್ದ ದೋಷಮುಕ್ತ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನೋಟೀಸ್ ಜಾರಿ ಮಾಡಿದೆ. ನ್ಯಾಯಮೂರ್ತಿ ಪರ್ದಿವಾಲಾ, ಕೆ.ವಿನೋದ್ ಚಂದ್ರನ್ ಅವರ ದ್ವಿಸದಸ್ಯ ಪೀಠವು ಹೈಕೋರ್ಟ್‌ನ ನಡಾವಳಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

**ಪ್ರಕರಣದ ಹಿನ್ನಲೆ**

ಮನೆಗೆಲಸದಾಕೆಯ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಹಾಗು ಅವರ ತಂದೆ ಹೆಚ್.ಡಿ.ರೇವಣ್ಣ ವಿರುದ್ಧ ಪ್ರಕರಣ ದಾಖಲಾಗಿತ್ತು. ಈಗಾಗಲೇ ಪ್ರಜ್ವಲ್ ರೇವಣ್ಣ ನ್ಯಾಯಾಂಗ ಬಂಧನದಲ್ಲಿದ್ದು, ಆತನ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಗೆ ಸಿದ್ಧತೆಗಳು ನಡೆಯುತ್ತಿವೆ. ಮನೆಗೆಲಸದಾಕೆಗೆ ಕಿರುಕುಳ ನೀಡಲಾಗಿತ್ತು ಮತ್ತು ಆಕೆಯ ಘನತೆಗೆ ಧಕ್ಕೆ ತರಲಾಗಿತ್ತು ಎಂಬ ಆರೋಪದ ಮೇಲೆ ಹೆಚ್.ಡಿ. ರೇವಣ್ಣ ಅವರನ್ನೂ ಕೂಡ ಬಂಧಿಸಿ ವಿಚಾರಣೆ ನಡೆಸಲಾಗಿತ್ತು.



ನಂತರ ಹೆಚ್.ಡಿ.ರೇವಣ್ಣ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಕೈಬಿಡಲು ಕೋರಿದ್ದರು. ಅವರ ವಿರುದ್ಧ ಐಪಿಸಿ ಸೆಕ್ಷನ್ 354 (ಮಹಿಳೆಯ ಘನತೆಗೆ ಧಕ್ಕೆ ತರುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲ ಪ್ರಯೋಗ) ಮತ್ತು 354ಎ (ಲೈಂಗಿಕ ಕಿರುಕುಳ) ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಆದರೆ, ಹೈಕೋರ್ಟ್ ಐಪಿಸಿ ಸೆಕ್ಷನ್ 354 ಅನ್ನು ರೇವಣ್ಣ ವಿರುದ್ಧದ ಪ್ರಕರಣ ದಿಂದ ಕೈಬಿಟ್ಟು, ಸೆಕ್ಷನ್ 354ಎ ಅಡಿ ಪ್ರಾಸಿಕ್ಯೂಷನ್ ಅನ್ನು ಮುಂದು ವರಿಸಲು ಕೆಳ ನ್ಯಾಯಾಲಯಕ್ಕೆ ಆದೇಶ ನೀಡಿತ್ತು.

**ಮೇಲ್ಮನವಿ ಸಲ್ಲಿಸಿದ್ದ ರಾಜ್ಯ ಸರ್ಕಾರ**

ಹೈಕೋರ್ಟ್‌ನ ಆದೇಶವನ್ನು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ, ಮೇಲ್ಮನವಿ ಸಲ್ಲಿಸಿತ್ತು. ಒಂದು ಪ್ರಕರಣದಲ್ಲಿ ಆರೋಪದಿಂದ ಮುಕ್ತಗೊಳಿಸಿದ್ದಕ್ಕೆ ಮತ್ತು ಒಂದು ಸೆಕ್ಷನ್ ಅನ್ನು ಕೈಬಿಟ್ಟಿದ್ದಕ್ಕೆ ರಾಜ್ಯ ಸರ್ಕಾರವು ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿತು. ಹೈಕೋರ್ಟ್ ಆರೋಪವನ್ನು ಹೇಗೆ ಬದಲಾಯಿಸಲು ಸಾಧ್ಯವೆಂದು ರಾಜ್ಯ ಸರ್ಕಾರ ತನ್ನ ಅರ್ಜಿಯಲ್ಲಿ ವಾದಿಸಿತ್ತು.

ರಾಜ್ಯ ಸರ್ಕಾರದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ವಿಚಾರಣೆಯ ಪ್ರಕ್ರಿಯೆ ಮತ್ತು ಕೊಟ್ಟಂತಹ ಆದೇಶದ ಬಗ್ಗೆ ಅಸಮಾಧಾನವನ್ನು ಹೊರ ಹಾಕಿದೆ. ಈ ಪ್ರಕರಣದಲ್ಲಿ ಹೈಕೋರ್ಟ್‌ನ ನಡಾವಳಿ ಸರಿಯಾಗಿಲ್ಲವೆಂದು ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ಈ ಪ್ರಕರಣವನ್ನು ಹೈಕೋರ್ಟ್ ಹೇಗೆ ಕೈಬಿಡಲು ಸಾಧ್ಯವಾಯಿತು ಎಂದು ಸುಪ್ರೀಂ ಕೋರ್ಟ್ ರೇವಣ್ಣ ಅವರಿಗೆ ನೋಟೀಸ್ ಜಾರಿ ಮಾಡಿದೆ.

# ಎತ್ತಿನಹೊಳೆ ಪೈಪ್‌ಲೈನ್ ದುರಸ್ತಿಗೆ ಕ್ರಮ


## ಇಂದು ಮಧ್ಯಾಹ್ನದ ವೇಳೆಗೆ ಕೆಲಸ ಪೂರ್ಣ ಸಾಧ್ಯತೆ | ನೀರು ಹೊರ ಹಾಕಲು ಹರಸಾಹಸ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಹಲಸುಲಿಗೆ ಗ್ರಾಮದ ಬಳಿ ಎತ್ತಿನಹೊಳೆ ಯೋಜನೆಯ ಪೈಪ್‌ಲೈನ್ ಒಡೆದು ನೀರು ಚಿಮ್ಮಿದ ಹಿನ್ನಲೆಯಲ್ಲಿ ಸೋಮವಾರ ಯೋಜನೆ ಅಧಿಕಾರಿಗಳು ದುರಸ್ತಿ ಕಾರ್ಯ ಪ್ರಾರಂಭಿಸಿದ್ದಾರೆ.

ಭಾನುವಾರ ಬೆಳಗಿನ ಜಾವ 3.30ರ ವೇಳೆಗೆ ಒಡೆದ ಪೈಪ್‌ನಿಂದ ಸುಮಾರು 6 ಗಂಟೆಗಳ ಕಾಲ ಆಕಾಶದೆತ್ತರಕ್ಕೆ ನೀರು ಕಾರಂಜಿಯಂತೆ ಚಿಮ್ಮಿತು. ಸ್ಥಳೀಯರ ಮಾಹಿತಿ ಆಧರಿಸಿ ಸ್ಥಳಕ್ಕೆ ದೌಡಾಯಿಸಿದ್ದ ಅಧಿಕಾರಿಗಳು ತ್ವರಿತಗತಿಯಲ್ಲಿ ನೀರಿನ ಸಂಪರ್ಕ ಕಡಿತಗೊಳಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಭಾನುವಾರ ಮಧ್ಯಾಹ್ನದಿಂದಲೇ ಬೃಹದಾಕಾರದ ಪೈಪ್‌ನಲ್ಲಿ ಮ್ಯಾನ್‌ಹೋಲ್ ನಿರ್ಮಿಸಿ ವೆಲ್ಡಿಂಗ್ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಮಂಗಳವಾರ ಮಧ್ಯಾಹ್ನದ ವೇಳೆಗೆ ದುರಸ್ತಿ ಕೆಲಸ ಮುಗಿಯಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ದೊಡ್ಡನಾಗರ ಗ್ರಾಮದಿಂದ ಹೆಬ್ಬನಹಳ್ಳಿವರೆಗೆ ಭೂಮಿಯೊಳಗೆ ಅಳವಡಿಸಿರುವ ಸುಮಾರು 10 ಅಡಿ ಸುತ್ತಳತೆಯ ಪೈಪ್‌ನ ವೆಲ್ಡಿಂಗ್ ತುಂಡಾಗಿ ಅವಾಂತರ ಸೃಷ್ಟಿಯಾಗಿದೆ ಎಂದು ಅಂದಾಜಿಸಲಾಗಿದೆ. ದುರಸ್ತಿ ಕಾರ್ಯ ಪ್ರಾರಂಭಿಸಬೇಕೆಂದರೆ ಪೈಪ್‌ನಲ್ಲಿ ಸಂಗ್ರಹವಿರುವ ಭಾರೀ ಪ್ರಮಾಣದ ನೀರನ್ನು ಹೊರ ತೆಗೆಯಬೇಕು. ಅದಕ್ಕಾಗಿ ಪೈಪ್‌ಗೆ ರಂಧ್ರ ಮಾಡಿ ನೀರನ್ನು ಹೊರಬಿಡಲಾಗುತ್ತಿದೆ. ಜೊತೆಗೆ ನೀರಿನ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ನಿರ್ಮಿಸಿರುವ ವಾಲ್ವ್‌ಗಳನ್ನು ತೆರೆದು ಸಮೀಪದ ಹಳ್ಳಕ್ಕೆ ನೀರನ್ನು ಹರಿಸಲಾಗುತ್ತಿದೆ. ಅಂದಾಜು ಎರಡು ದಿನಗಳಿಂದ ಈ ಪ್ರಕ್ರಿಯೆ ನಡೆಯುತ್ತಿದ್ದರೂ ನೀರಿನ ರಭಸ ಕಡಿಮೆಯಾಗಿಲ್ಲ. ಈ ಪ್ರಕ್ರಿಯೆಗಾಗಿ ಅಧಿಕಾರಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ.



> ಸಕಲೇಶಪುರ ತಾಲ್ಲೂಕಿನ ಹಲಸುಲಿಗೆ ಬಳಿ ಪೈಪ್‌ಲೈನ್ ಒಡೆದು ನೀರು ವ್ಯರ್ಥವಾಗಿ ಹರಿದಿದೆ. ವೆಲ್ಡಿಂಗ್ ತುಂಡರಿಸಿರುವ ಜಾಗವನ್ನು ಗುರುತಿಸಿ ರಿಪೇರಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಈಗ ಚಿಮ್ಮಿದ ನೀರಿನಿಂದ ಯಾವುದೇ ಬೆಳೆ ಹಾನಿಯಾಗಿಲ್ಲ. ನಮ್ಮ ಅಧಿಕಾರಿಗಳು ಕೂಡಲೇ ಎಚ್ಚೆತ್ತು ಅನಾಹುತ ತಪ್ಪಿಸಿದ್ದಾರೆ.
>
> -ಆನಂದ್, ಮುಖ್ಯ ಇಂಜಿನೀಯರ್ ಎತ್ತಿನಹೊಳೆ ಯೋಜನೆ

**20 ಸಾವಿರ ಜಾಯಿಂಟ್‌ಗಳಿವೆ**

ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಪ್ರಾರಂಭಿಕ ಹಂತವಾಗಿ ನೀರನ್ನು ಹರಿಸಲಾಗುತ್ತಿದೆಯಾದರೂ ಅದು ಇನ್ನು ವಾಣಿವಿಲಾಸ

» ನಾಲ್ಕನೇ ಪುಟದಲ್ಲಿ

# ಜನಪರ ಸೇವಾ ಕಾರ್ಯಗಳಿಂದ ಸಾಮಾಜಿಕ ಪರಿವರ್ತನೆ

## ಡಾ.ವೈ.ಎಸ್.ವೀರಭದ್ರಪ್ಪ ಜೀವನ ಚರಿತ್ರೆ, ಸೇವಾ ರತ್ನ ಕೃತಿ ಬಿಡುಗಡೆ

• ಪ್ರಜೋದಯ ವರದಿ

**ಹಾಸನ:** ಸಮಾಜದ ಅಭಿವೃದ್ಧಿ ಸರ್ಕಾರದ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯವಿಲ್ಲ, ಸಾರ್ವಜನಿಕರೂ ಜನಪರ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದು ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ನಾಗರಿಕರ ಹಿತರಕ್ಷಣಾ ವೇದಿಕೆ ಹಾಗು ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳು, ಮಠಾಧೀಶರು ಹಾಗು ಜನಪ್ರತಿನಿಧಿಗಳ ಸಮ್ಮುಖದಲ್ಲಿ ಭಾನುವಾರ ಆಯೋಜಿಸಿದ್ದ ಹೋರಾಟಗಾರ ಡಾ.ವೈ.ಎಸ್.ವೀರಭದ್ರಪ್ಪ ಅವರ ಜೀವನ ಚರಿತ್ರೆ ಸೇವಾ ರತ್ನ ಕೃತಿ ಬಿಡುಗಡೆ ಹಾಗು ಅಭಿನಂದನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.



ಸರ್ಕಾರಗಳ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ಸಮಾಜದ ವಿವಿಧ ಕ್ಷೇತ್ರಗಳ ನಾಗರಿಕರು ಕೈಲಾದ ಸೇವೆಯನ್ನು ಸಲ್ಲಿಸುವುದು ಶ್ಲಾಘನೀಯ. ಬಡವರು, ದೀನ ದಲಿತರು ಹಾಗು ಹಿಂದುಳಿದ ವರ್ಗಗಳ ಏಳಿಗೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸುವುದೇ ನಿಜವಾದ ಮಾನವೀಯತೆ. ಡಾ.ವೈ. ಎಸ್. ವೀರಭದ್ರಪ್ಪ ಅವರು ಕಳೆದ ಐದು ದಶಕಗಳಿಂದ ನಿರಂತರವಾಗಿ ಸಮಾಜಮುಖಿ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದು, ಅವರ ಸೇವೆಯನ್ನು ಗುರುತಿಸಿ ಗೌರವಿಸುತ್ತಿ

» ನಾಲ್ಕನೇ ಪುಟದಲ್ಲಿ

# ಮಂತ್ರಿ ಸ್ಥಾನ ಸಿಗುವ ವಿಶ್ವಾಸದಲ್ಲಿ ಶಿವಲಿಂಗೇಗೌಡ

• ಪ್ರಜೋದಯ ವರದಿ



**ಅರಸೀಕೆರೆ :** ಜಿಲ್ಲೆಯಲ್ಲಿ ಪಕ್ಷ ಸಂಘಟನೆ, ರಾಜಕೀಯ ಭವಿಷ್ಯದ ಉದ್ದೇಶದಿಂದ ಪಕ್ಷದ ನಾಯಕರು ತಮಗೆ ಮಂತ್ರಿ ಸ್ಥಾನ ನೀಡಲು ತೀರ್ಮಾನಿಸಿದ್ದಾರೆ. ಶೀಘ್ರವೇ ಆ ಆಸೆ ಈಡೇರಲಿದೆ ಎಂದು ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ತಿಳಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಗಿರುವುದು ನಾನೊಬ್ಬನೇ ಕಾಂಗ್ರೆಸ್ ಶಾಸಕ. ಹಾಗಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಾಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಾಗು ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ ಎಂದರು.

ಸಚಿವ ಸ್ಥಾನಕ್ಕಾಗಿ ನಾನು ಕಾಯುತ್ತಿದ್ದೇನೆ. ಹೈಕಮಾಂಡ್ ಯಾವ ತೀರ್ಮಾನ ಮಾಡುತ್ತದೆಯೋ ಅದಕ್ಕೆ ಬದ್ಧರಾಗಿರುತ್ತೇನೆ. ಸಂಪುಟ ವಿಸ್ತರಣೆ ಸಂಬಂಧ ಯಾರನ್ನೂ ಸಭೆಗೆ ಕರೆದಿಲ್ಲ. ವಿನಯ್ ಕಾರ್ತಿಕ್ ಗೆದ್ದಿದ್ದಕ್ಕೆ ಊಟ ಹಾಕಿಸಿದರು. ಅಲ್ಲಿ ಯಾವುದೇ ಚರ್ಚೆಯಾಗಿಲ್ಲ, ಸಂಪುಟ ವಿಸ್ತರಣೆ ತೀರ್ಮಾನ ಮಾಡುವುದು ಹೈಕಮಾಂಡ್ ಎಂದರು.

ಜಿಲ್ಲೆಯಿಂದ ನಿಯೋಗ ಹೋಗಿ ಒತ್ತಡ ಹೇರುವ ಕುರಿತ ಪ್ರತಿಕ್ರಿಯಿಸಿ, ಯಾರನ್ನೂ ಕರೆದುಕೊಂಡು ಬರಬೇಡಿ, ಒತ್ತಡ ತರಬೇಡಿ ಎಂದಿದ್ದಾರೆ. ನಾವು ಯಾರನ್ನೂ ಕೇಳಿಲ್ಲ, ಕರೆದಿಲ್ಲ. ನಾನು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರುವಾಗ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಸುರ್ಜೇವಾಲಾ ಅವರು ನಮ್ಮ ಸರ್ಕಾರ ಬಂದಾಗ ನಿಮ್ಮನ್ನ ಮಂತ್ರಿ ಮಾಡುತ್ತೇವೆ ಬನ್ನಿ ಎಂದು ಆಹ್ವಾನ ನೀಡಿದರು. ಇನ್ನೂ ಅದೇ ವಿಶ್ವಾಸದಲ್ಲಿ ನಡೆದುಕೊಂಡಿದ್ದಾರೆ. ಮುಂದೆಯೂ ಅದೇ ವಿಶ್ವಾಸದಲ್ಲಿ ನಡೆದುಕೊಳ್ಳುತ್ತಾರೆ ಎನ್ನುವ ಭರವಸೆ ಇದೆ. ನಾನೂ ಕೂಡ ಸಚಿವ ಸ್ಥಾನ ಸಿಗುತ್ತದೆ ಎನ್ನುವ ವಿಶ್ವಾಸದಲ್ಲಿದ್ದೇನೆ. ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಆಗಬೇಕಲ್ಲವೇ ಎಂದು ಹೇಳಿದರು.

# ಕಿರುಕುಳ : ಗೃಹಿಣಿ ಆತ್ಮಹತ್ಯೆ

• ಪ್ರಜೋದಯ ವರದಿ

**ಹಾಸನ:** ಪತಿಯ ಕಿರುಕುಳ ಸಹಿಸಲಾಗದೆ ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಕಾರ್ಲೆ ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಬೇಲೂರು ತಾಲ್ಲೂಕು ಯಕಶೆಟ್ಟಿಹಳ್ಳಿ ಗ್ರಾಮದ ಪುಟ್ಟೋಜಿ ರಾವ್ ಅವರ ಪುತ್ರಿ ಚಂದ್ರಕಲಾ (26) ಅವರು ಮೃತಪಟ್ಟಿದ್ದಾರೆ. ಆರು ವರ್ಷಗಳ ಹಿಂದೆ ಕಾರ್ಲೆ ಕೊಪ್ಪಲು ಗ್ರಾಮದ ಪ್ರಶಾಂತ್ ಎಂಬಾತನ ಜೊತೆಗೆ ಮದುವೆ ಮಾಡಿಕೊಡಲಾಗಿತ್ತು. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಇತ್ತೀಚೆಗೆ ಗಂಡ-ಹೆಂಡತಿ ನಡುವೆ ಜಗಳ ನಡೆಯುತ್ತಿತ್ತು. ಭಾನುವಾರ ಮನೆಯಲ್ಲಿದ್ದಾಗಲೇ ಚಂದ್ರಕಲಾ ಸೀರೆಯಿಂದ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದಾರೆ. ವಿಷಯ ತಿಳಿದು ತಕ್ಷಣವೇ ಅಕ್ಕಪಕ್ಕದ ಮನೆಯವರು ರಕ್ಷಣೆಗೆ ಮುಂದಾದರೂ ಪ್ರಯೋಜನವಾಗಿಲ್ಲ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೆಟ್ಟದ ಭೈರವೇಶ್ವರ ದೇವಾಲಯದ ಆವರಣದಲ್ಲಿ ಭಕ್ತರೊಂದಿಗೆ ಅಧಿಕಾರಿಗಳ ಸಭೆ

# ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಿಲ್ಲ: ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಬೆಟ್ಟದ ಭೈರವೇಶ್ವರ ದೇವಾಲಯದ ಪಾವಿತ್ರ್ಯ ಹಾಗು ಧಾರ್ಮಿಕ ವಾತಾವರಣಕ್ಕೆ ಧಕ್ಕೆ ಉಂಟಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಪ್ರವಾಸಿಗರು ದೇವಾಲಯದ ಆವರಣದಲ್ಲಿ ಮನಬಂದಂತೆ ವರ್ತಿಸಿದ ಹಿನ್ನಲೆ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರು, ಭಕ್ತರು, ತಹಶೀಲ್ದಾರ್ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಈ ಕ್ಷೇತ್ರವು ಎಂಟು ಗ್ರಾಮಗಳ ಜನರ ಆರಾಧ್ಯ ದೈವವಾಗಿದೆ. ಪ್ರಕೃತಿ ಸೌಂದರ್ಯದ ಮಧ್ಯೆ ನೆಲೆಸಿರುವ ಕಾರಣ ನಿತ್ಯ ಸಾವಿರಾರು ಪ್ರವಾಸಿ

» ನಾಲ್ಕನೇ ಪುಟದಲ್ಲಿ



### ದೇವಾಲಯದ ಅಭಿವೃದ್ಧಿಗೆ 8 ಲ.ರೂ.

ಸ್ಥಳೀಯರ ಸಲಹೆ ಆಧರಿಸಿ ದೇವಾಲಯದ ಅಭಿವೃದ್ಧಿಗೆ ಈಗಾಗಲೇ 8 ಲ.ರೂ. ಅನುದಾನ ಮೀಸಲಿಡಲಾಗಿದೆ. ಎರಡು-ಮೂರು ದಿನಗಳೊಳಗೆ ಪ್ರವೇಶ ದ್ವಾರ , ವಾಚ್‌ಮನ್ ಕೊಠಡಿ, ಶೌಚಾಲಯ, ವಿದ್ಯುತ್ ಸಂಪರ್ಕ ಸೇರಿ ಮೂಲಭೂತ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯೂ ಪೂರ್ಣಗೊಂಡಿದ್ದು, ಅಗತ್ಯ ಸೌಲಭ್ಯಗಳನ್ನು ಶೀಘ್ರ ಕಲ್ಪಿಸಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

### ದೇವಾಲಯ ಬಳಿ ಪ್ರವಾಸಿಗರ ಹುಚ್ಚಾಟ



**ಸಕಲೇಶಪುರ :** ಬೆಟ್ಟದ ಭೈರವೇಶ್ವರ ದೇವಾಲಯ ಆವರಣದಲ್ಲಿ ಪ್ರವಾಸಿಗರು ಡಿಜೆ ಹಾಕಿಕೊಂಡು ಮನಬಂದಂತೆ ನೃತ್ಯ ಮಾಡಿ ಹುಚ್ಚಾಟ ಮೆರೆದಿದ್ದಾರೆ. ತಾಲ್ಲೂಕಿನ ಮರಗುಂದ ಗ್ರಾಮದಲ್ಲಿರುವ ಬೆಟ್ಟದ ಭೈರವೇಶ್ವರ ದೇವಾಲಯದ ಆವರಣಕ್ಕೆ ಚಪ್ಪಲಿ ಹಾಕಿಕೊಂಡು ಬರುವುದು ನಿಷೇಧವಿದ್ದರು ಚಪ್ಪಲಿ, ಶೂ ಹಾಕಿಕೊಂಡು ದೇವಾಲಯದ ಸುತ್ತ ಓಡಾಟ ನಡೆಸಿದ್ದಾರೆ. ಕೆಲ ದಿನಗಳ ಹಿಂದೆ ಇದೇ ವಿಚಾರವಾಗಿ ಸ್ಥಳೀಯರು ಹಾಗು ಪ್ರವಾಸಿಗರ ನಡುವೆ ಮಾರಾಮಾರಿ ನಡೆದಿತ್ತು.

ಕಳೆದ ಎರಡು ದಿನಗಳ ಹಿಂದೆ ದೇವಾಲಯದ ಕೆಳಭಾಗದಲ್ಲಿ ಡ್ರಿಫ್ಟಿಂಗ್ ಮಾಡಿ ಜಾನುವಾರುಗಳ ಮೇವು ಮಣ್ಣಪಾಲು ಮಾಡಿದ್ದರು. ಪದೇ ಪದೇ ಇಂತಹ ಘಟನೆಗಳು ಮರುಕಳುಹಿಸುತ್ತಿದ್ದು, ದೇವಾಲಯದ ಪಾವಿತ್ರತೆ ಹಾಳು ಮಾಡುತ್ತಿದ್ದಾರೆಂದು ಸ್ಥಳೀಯರ ಕಿಡಿಕಾರಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಪ್ರವಾಸಿಗರ ಹುಚ್ಚಾಟಕ್ಕೆ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಗ್ರಾಮಸ್ಥರೇ ತಕ್ಕ ಶಾಸ್ತಿ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

# ಕುಸಿದ ತೋಟಗಾರಿಕೆ ಇಲಾಖೆ ಕಚೇರಿ ಕಟ್ಟಡ : ತಪ್ಪಿದ ಅನಾಹುತ



• ಪ್ರಜೋದಯ ವರದಿ


**ಸಕಲೇಶಪುರ :** ಪಟ್ಟಣದ ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ಕಚೇರಿ ಆರಂಭಕ್ಕೂ ಮುನ್ನವೇ ಕುಸಿದು ಬಿದ್ದಿರುವ ಘಟನೆ ಸೋಮವಾರ ನಡೆದಿದ್ದು, ಭಾರೀ ಅನಾಹುತ ತಪ್ಪಿದೆ.

ನಿರಂತರ ಮಳೆ, ಬಿರುಗಾಳಿಯ ಪರಿಣಾಮ ಕಟ್ಟಡ ಮತ್ತಷ್ಟು ಶಿಥಿಲಗೊಂಡಿತ್ತು. ಕಚೇರಿಯಲ್ಲಿ ಐವರು ಖಾಯಂ ಸಿಬ್ಬಂದಿ ಹಾಗು ಇಬ್ಬರು ಹೊರಗುತ್ತಿಗೆ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಕಚೇರಿ ಸಮಯದಲ್ಲಿ ಕಟ್ಟಡ ಕುಸಿದಿದ್ದರೆ ಜೀವಹಾನಿ ಸಂಭವಿಸುವ ಸಾಧ್ಯತೆ ಇತ್ತು. ಕಟ್ಟಡ ಕುಸಿಯುವ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದ ಸಿಬ್ಬಂದಿ ಮುನ್ನೆಚ್ಚರಿಕಾ ಕ್ರಮವಾಗಿ ಶನಿವಾರ ಸಂಜೆ ಕಚೇರಿಯ ಅಗತ್ಯ ದಾಖಲೆಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದರು.

ಭಾನುವಾರ ಮಧ್ಯರಾತ್ರಿ ಸ್ವಲ್ಪ ಭಾಗ ಕುಸಿದಿದ್ದ ಕಟ್ಟಡ ಸೋಮವಾರ ಬೆಳಿಗ್ಗೆ ಸಂಪೂರ್ಣ ನೆಲಸಮಗೊಂಡಿತು. ಮಾಹಿತಿ ತಿಳಿದು ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು ಅವರು ಭೇಟಿ ನೀಡಿ ಪರಿ ಶೀಲನೆ ನಡೆಸಿದರು. ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಇದ್ದರು. ಶಿಥಿಲ ಗೊಂಡಿರುವ ಸರ್ಕಾರಿ ಕಟ್ಟಡಗಳ ಸ್ಥಿತಿಗತಿ ಪರಿಶೀಲಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳ ಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.

> ನಾವು ನೋಡುತ್ತಿರುವ ಪ್ರಪಂಚವನ್ನು ಹೊಸ ಕಣ್ಣಿನಿಂದ ನೋಡುವಾಗ, ಪ್ರತಿಯೊಂದು ಕ್ಷಣವೂ ಸೃಜನಶೀಲತೆಯ ಹೊಸ ಕಥೆಯಾಗುತ್ತದೆ. ವೈವಿಧ್ಯಮಯವಾಗಿ ಓದುವ ಮೂಲಕ ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗದೆ ಇತಿಹಾಸ, ವಿಜ್ಞಾನ, ಕಲೆ ಹೀಗೆ ಎಲ್ಲ ವಿಷಯಗಳ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಜ್ಞಾನದ ವಿಸ್ತಾರವೇ ಸೃಜನಶೀಲತೆಯ ಇಂಧನ. ಉತ್ತಮ ಚಿಂತಕರೊಂದಿಗೆ ಕಾಲ ಕಳೆಯುವುದು ನಮ್ಮ ಆಲೋಚನಾ ಕ್ರಮವನ್ನು ಉನ್ನತೀಕರಿಸುತ್ತದೆ. ನಕಾರಾತ್ಮಕ ವಿಚಾರಗಳನ್ನು ಬದಿಗಿಟ್ಟು ಸದಾ ಕ್ರಿಯಾಶೀಲವಾಗಿರುವುದನ್ನು ರೂಢಿಸಿಕೊಳ್ಳುವುದು ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ಸೃಜನಶೀಲತೆ ಹೆಚ್ಚಿಸಿಕೊಳ್ಳಲು ಬಹಳಷ್ಟು ಸಾಧಕರ ಜೀವನದ ಪಾಠ ನಮಗೆ ಸಹಾಯಕವಾಗುತ್ತದೆ. ಗೌತಮ ಬುದ್ಧ, ಮಹಾತ್ಮ ಗಾಂಧೀಜಿ ಮತ್ತು ಎಪಿಜೆ ಅಬ್ದುಲ್ ಕಲಾಂ ಅವರಂತಹ ಸಾಧಕರನ್ನು ಗಮನಿಸಿದರೆ, ಅವರು ಸಾಮಾನ್ಯ ಜನರಿಗಿಂತ ಭಿನ್ನವಾಗಿ ಯೋಚಿಸಿದ್ದರಿಂದಲೇ ಇತಿಹಾಸದಲ್ಲಿ ಉಳಿಯುವಂತಹ ಗುರಿಯನ್ನು ತಲುಪಲು ಸಾಧ್ಯವಾಯಿತು.

# ಸೃಜನಶೀಲತೆಯೇ ಜಗತ್ತಿನ ಸಕಲ ಪ್ರಗತಿಯ ಮೂಲ ಮಂತ್ರ



ಚಿಂತನೆಯ ವಿಧಾನ ಹೊಸದಾದರೆ, ಜೀವನದ ಗುರಿಯಾ ಹೊಸದಾಗುತ್ತದೆ. ನಮ್ಮ ಬದುಕು ಒಂದು ಸುಂದರವಾದ ಕಲಾಕೃತಿಯಾಗ ಬೇಕಾದರೆ, ಅದನ್ನು ಬಿಡಿಸುವ ಕುಂಚವಾದ ಚಿಂತನೆ ಸರಿ ಇರಬೇಕು. ಬದಲಾವಣೆ ಎಂಬುದು ಜಗತ್ತಿನ ನಿಯಮ. ಕಾಲಕ್ಕೆ ತಕ್ಕಂತೆ ನಮ್ಮ ಚಿಂತನೆ ಮತ್ತು ಆಲೋಚನೆಗಳನ್ನು ನವೀಕರಿಸಿಕೊಂಡರೆ, ಬದುಕು ನಮಗೆ ಹೊಸದಾದ ಮತ್ತು ಉಜ್ವಲವಾದ ಭವಿಷ್ಯವನ್ನು ಉಡುಗೊರೆಯಾಗಿ ನೀಡುತ್ತದೆ. ಇಲ್ಲಿ ಚಿಂತನೆ, ಯೋಚನೆ ಮತ್ತು ಆಲೋಚನೆ ಎಲ್ಲಾ ಪದಗಳು ಯಾವುದಾದರೊಂದು ಬದಲಾವಣೆಯ ಮುನ್ಸೂಚಕವಾಗಿವೆ. ನಾನಿಲ್ಲಿ ವಿಚಾರ ಮಾಡುತ್ತಿರುವುದು ಸೃಜನಶೀಲತೆಯ ಬಗ್ಗೆ. ಸೃಜನಶೀಲತೆ ಎಂಬುದು ಕೇವಲ ಹೊಸದನ್ನು ಸೃಷ್ಟಿಸುವ ಸಾಮರ್ಥ್ಯವಲ್ಲ; ಅದು ನಮ್ಮೊಳಗಿನ ಕಲ್ಪನೆಗೆ ರೆಕ್ಕೆಗಳನ್ನು ನೀಡುವ ಶಕ್ತಿಯಾಗಿದೆ. ಪ್ರತೀ ಮನುಷ್ಯನಲ್ಲೂ ಸೃಜನಶೀಲತೆ ಅಡಗಿಕೊಂಡಿದೆ. ಆದರೆ ಅದನ್ನು ಗುರುತಿಸಿ ಬೆಳೆಸುವುದು ನಮ್ಮ ಮನಸ್ಸಿನ ತಾಳ್ಮೆ ಮತ್ತು ಧೈರ್ಯಕ್ಕೆ ಅವಲಂಬಿತವಾಗಿದೆ. ಸೃಜನಶೀಲತೆ ಎನ್ನುವುದು ಕೇವಲ ಕಲೆ ಅಥವಾ ಸಾಹಿತ್ಯಕ್ಕೆ ಸೀಮಿತವಾದ ಚಟುವಟಿಕೆಯಲ್ಲ; ಅದು ಮಾನವ ಮೆದುಳಿನ ಅತ್ಯುನ್ನತ ಸಾಮರ್ಥ್ಯ ಮತ್ತು ಅಸ್ತಿತ್ವದ ಸಾರ. ಹೊಸದಾದ ಚಿಂತನೆ ಮತ್ತು ಆಲೋಚನೆಗಳನ್ನು ಹುಟ್ಟುಹಾಕುವ, ಅಸ್ತಿತ್ವದಲ್ಲಿರುವ ಸಮಸ್ಯೆಗಳಿಗೆ ಭಿನ್ನವಾದ ಪರಿಹಾರಗಳನ್ನು ಕಂಡುಕೊಳ್ಳುವ ಮತ್ತು ಶೂನ್ಯದಿಂದ ಸೃಷ್ಟಿಸುವ ಪ್ರಕ್ರಿಯೆಯೇ ಸೃಜನಶೀಲತೆ ಆಗಿದೆ. ಸೃಜನಶೀಲತೆ ಎಂದರೆ ವಿಭಿನ್ನವಾಗಿ ಯೋಚಿಸುವುದು. ಇತರರು ಕಾಣದ ದಾರಿಯನ್ನು ಕಾಣುವುದು. ಸಾಮಾನ್ಯ ವಿಷಯದಲ್ಲೂ ವಿಶೇಷತೆಯನ್ನು ಕಂಡುಹಿಡಿಯುವುದು. ಇದೇ ಸೃಜನಶೀಲತೆಯ ಅರ್ಥ.

**ನಿದರ್ಶನಗಳು:** ಒಂದೂರಿನಲ್ಲಿ ಅಜಯ್ ಮತ್ತು ವಿಜಯ್ ಎಂಬ ಇಬ್ಬರು ಹುಡುಗರು ಇದ್ದರು. ಇಬ್ಬರೂ ಒಂದೇ ಶಾಲೆಯಲ್ಲಿ ಒಂದೇ ತರಗತಿಯಲ್ಲಿ ಓದುತ್ತಿದ್ದರು. ಗುರುಗಳು ಒಂದು ದಿನ ಈ ರೀತಿಯ ಪ್ರಶ್ನೆ ಕೇಳಿದರು. ಮಕ್ಕಳೇ, ನಿಮಗೆ ಒಂದು ಕಲ್ಲು ಸಿಕ್ಕಿದರೆ ಅದರಿಂದ ಏನು ಮಾಡುತ್ತೀರಿ? ಆಗ ಅಜಯ್ ಹೇಳಿದ: ಅದನ್ನು ಹಾಗೆಯೇ ಬಿಟ್ಟುಬಿಡುತ್ತೇನೆ ಸರ್. ಕೂಡಲೇ ವಿಜಯ್ ಹೇಳಿದ: ಅದನ್ನು ತುಂಡರಿಸಿ ಒಂದು ಸುಂದರ ಮೂರ್ತಿಯನ್ನಾಗಿ ಮಾಡುತ್ತೇನೆ ಸರ್. ಗುರುಗಳು ಸರಿ ಎಂದರು.

ಒಂದೊಮ್ಮೆ ಮೋಹನ್ ಎಂಬ ಚಿತ್ರಗಾರ ಸಮುದ್ರದ ಚಿತ್ರವನ್ನು ಬಿಡಿಸುತ್ತಿದ್ದ. ಇತರೆ ಚಿತ್ರಗಾರರೆಲ್ಲರೂ ನೀಲಿ ಬಣ್ಣ ಬಳಸಿ ಸಮುದ್ರವನ್ನು ಚಿತ್ರಿಸುತ್ತಿದ್ದರು. ಆದರೆ ಮೋಹನ್ ಹಸಿರು, ಕಿತ್ತಳೆ, ಕೆಂಪು ಬಣ್ಣಗಳನ್ನು ಬಳಸಿ ವಿಚಿತ್ರವಾಗಿ ಚಿತ್ರ ಬಿಡಿಸಿದ. ಜನರು ಕೇಳಿದರು: ಇದು ಸಮುದ್ರವೇ? ನೀಲಿ ಬಣ್ಣವೇ ಇಲ್ಲ! ಚಿತ್ರಗಾರ ಮೋಹನ್ ಹಾಸ್ಯಮಾಡಿ ಹೇಳಿದ: ನಾನು ನೋಡಿದ ಸಮುದ್ರವು ಸೂರ್ಯಾಸ್ತದ ಹೊತ್ತಿನಲ್ಲಿ ಹೀಗೆ ಕಾಣಿಸಿತು. ನಾನು ನಿಜವನ್ನು ಬಿಡಿಸುತ್ತಿದ್ದೇನೆ, ನಿಯಮಗಳನ್ನು ಅಲ್ಲ.

ವಿದ್ಯಾರ್ಥಿ ಗಂಗಾಧರ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದು ದುಃಖಗೊಂಡಿದ್ದ. ಅವನು ಚಿತ್ರ ಬಿಡಿಸಲು ತುಂಬಾ ಇಷ್ಟಪಡುತ್ತಿದ್ದ. ಆದರೆ ಇದರ ಪ್ರಯೋಜನವೇನು? ಎಂದು ಎಲ್ಲರೂ ಆತನನ್ನು ಪ್ರಶ್ನಿಸುತ್ತಿದ್ದರು. ಒಂದು ದಿನ ಗಂಗಾಧರನು ತನ್ನ ಮನದ ನೋವನ್ನು ಚಿತ್ರವಾಗಿ ವ್ಯಕ್ತಪಡಿಸಿದ. ಆ ಚಿತ್ರವನ್ನು ಶಿಕ್ಷಕರು ನೋಡಿ ಮೆಚ್ಚಿದರು. ನಂತರ ವಿದ್ಯಾರ್ಥಿ ಗಂಗಾಧರ ಬದುಕಿನಲ್ಲಿ ದೊಡ್ಡ ಕಲಾವಿದನಾದ.

ಆತ್ಮೀಯ ಓದುಗರೇ, ಈ ಮೇಲಿನ ಮೂರೂ ನಿದರ್ಶನಗಳಲ್ಲಿ ನಾವು ಕಂಡುಕೊಂಡಿದ್ದೇನು ಎಂಬುದನ್ನು ಆಲೋಚಿಸಿ. ಅಲ್ಲಿ ಸೃಜನಶೀಲತೆಯ ವ್ಯತ್ಯಾಸ ಕಾಣುತ್ತದೆ. ಒಂದು ಕಲ್ಲಿನಿಂದ ವಿಜಯ್ ನಿರ್ಮಿಸಿದ ಮೂರ್ತಿ, ಚಿತ್ರಗಾರ ಮೋಹನ್ ಬಿಡಿಸಿದ ಸಮುದ್ರದ ಚಿತ್ರ, ಗಂಗಾಧರನ ಮನದ ನೋವನ್ನು ಚಿತ್ರದಲ್ಲಿ ಸೃಜಿಸಿದ್ದು ಎಲ್ಲವೂ ಸೃಜನಶೀಲತೆಯ ವಿಭಿನ್ನ ಮತ್ತು ವಿಶಿಷ್ಟ ನಿದರ್ಶನಗಳಾಗಿವೆ. ಒಂದೇ ವಸ್ತುವನ್ನು ಇಬ್ಬರು ವಿಭಿನ್ನವಾಗಿ ನೋಡುತ್ತಾರೆ. ಒಬ್ಬನಿಗೆ ಅದು ಕೇವಲ ಕಲ್ಲು; ಇನ್ನೊಬ್ಬನಿಗೆ ಅದು ಕಲೆಯ ರೂಪವಾಗಿ ಕಾಣುವ ಚಿಂತನೆಯೇ ಸೃಜನಶೀಲತೆ ಯೆನಿಸುತ್ತದೆ. ಮನುಷ್ಯನ ಆಲೋಚನಾ ಲಹರಿ ಮತ್ತು ಅವನ ಬದುಕಿನ ದಿಕ್ಕಿನ ನಡುವೆ ಇರುವ ಅವಿನಾಭಾವ ಸಂಬಂಧವನ್ನು ಎತ್ತಿ ತೋರಿಸುತ್ತದೆ. ನಮ್ಮ ಜೀವನ ನಮ್ಮ ವಿಚಾರಗಳ ಪ್ರತಿಬಿಂಬವಾಗಿದೆ. ನಾವು ಹೇಗೆ ಯೋಚಿಸುತ್ತೇವೆಯೋ, ಹಾಗೆಯೇ ನಮ್ಮ ವ್ಯಕ್ತಿತ್ವ ಮತ್ತು ಭವಿಷ್ಯ ರೂಪಿತವಾಗುತ್ತದೆ.



**ಸೃಜನಶೀಲತೆಯ ಆಯಾಮ ಗಳು:** ಸೃಜನಶೀಲತೆ ಎಂದರೆ ಇದ್ದುದ್ದನ್ನು ಇದ್ದಂತೆ ನೋಡುವುದಲ್ಲ, ಬದಲಾಗಿ ಏನಾಗಬಹುದು ಎಂದು ನೋಡುವುದು. ಇದು ಜ್ಞಾನ ಮತ್ತು ಕಲ್ಪನಾಶಕ್ತಿಯ ಸಂಗಮ. ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಹೇಳುವಂತೆ, ಕಲ್ಪನಾಶಕ್ತಿಯು ಜ್ಞಾನಕ್ಕಿಂತ ಮಿಗಿಲಾದುದು. ಜ್ಞಾನವು ಸೀಮಿತವಾದುದು, ಆದರೆ ಕಲ್ಪನಾಶಕ್ತಿಯು ಇಡೀ ಜಗತ್ತನ್ನೇ ಆವರಿಸಬಲ್ಲದು. ದಿನದಲ್ಲಿ ಕನಿಷ್ಠ ಅರ್ಧ ಗಂಟೆಯಾದರೂ ಮೌನವಾಗಿದ್ದು ನಮ್ಮ ಆಲೋಚನೆಗಳನ್ನು ಗಮನಿಸಬೇಕು. ಏಕೆಂದರೆ ಮೌನವು ಕಲ್ಪನಾಶಕ್ತಿಯ ತಾಯಿಯಾಗಿದೆ. ಸೃಜನಶೀಲತೆಯ ವಿವಿಧ ಆಯಾಮಗಳನ್ನು ಒಳಗೊಂಡಿದೆ. ಸೃಜನಶೀಲತೆಯು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ತನ್ನ ಪ್ರಭಾವವನ್ನು ಬೀರಿದೆ. ಇದನ್ನು ನಾವು ಈ ಕೆಳಗಿನ ಪ್ರಮುಖ ಉದಾಹರಣೆಗಳ ಮೂಲಕ ಅರ್ಥಮಾಡಿಕೊಳ್ಳ ಬಹುದು. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಿದರ್ಶನ ನೀಡುವುದಾದರೆ : ಸರ್ ಐಸಾಕ್ ನ್ಯೂಟನ್‌ರವರಿಗೆ ತನ್ನ ತಲೆಯ ಮೇಲೆ ಸೇಬು ಬಿದ್ದಾಗ, ಅದು ಕೇವಲ ಒಂದು ಸಾಮಾನ್ಯ ಘಟನೆಯಾಗಿತ್ತು. ಆದರೆ ಅವರ ಸೃಜನಶೀಲ ಮನಸ್ಸು ಇದು ಕೆಳಗೆ ಏಕೆ ಬೀಳಬೇಕು? ಮೇಲೆ ಏಕೆ ಹೋಗಬಾರದು? ಎಂಬ ಪ್ರಶ್ನೆಯನ್ನು ಹಾಕಿಕೊಂಡಿತು. ಈ ಕುತೂಹಲವೇ ಗುರುತ್ವಾಕರ್ಷಣೆಯ ನಿಯಮದ ಆವಿಷ್ಕಾರಕ್ಕೆ ಕಾರಣವಾಯಿತು. ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನಿದರ್ಶನ ಕೊಡುವುದಾದರೆ, ಲಿಯೊನಾರ್ಡೊ ಡಾವಿಂಚಿಯ ಮೋನಾಲಿಸಾ ಚಿತ್ರಕಲೆ ಕೇವಲ ಬಣ್ಣಗಳ ಮಿಶ್ರಣವಲ್ಲ, ಅದರಲ್ಲಿರುವ ನಿಗೂಢ ನಗು ಮತ್ತು ಸ್ಫುಮಾಟೊ ತಂತ್ರಜ್ಞಾನವು ಕಲೆಯ ಇತಿಹಾಸದಲ್ಲೇ ಕ್ರಾಂತಿ ಉಂಟುಮಾಡಿತು. ಸಾಹಿತ್ಯದಲ್ಲಿ ಕುವೆಂಪು ಅವರ ರಾಮಾಯಣ ದರ್ಶನಂ ಹಳೆಯ ಕಥೆಗೆ ಹೊಸ ದರ್ಶನವನ್ನು ನೀಡಿದ ಸೃಜನಶೀಲತೆಯ ಶಿಖರವಾಗಿದೆ. ವಾಣಿಜ್ಯ ಮತ್ತು ಉದ್ಯಮ ಕ್ಷೇತ್ರದಲ್ಲಿ ನಿದರ್ಶನವೆಂದರೆ : ಸ್ಟೀವ್ ಜಾಬ್ಸ್ ಅವರು ಫೋನ್, ಮ್ಯೂಸಿಕ್ ಪ್ಲೇಯರ್ ಮತ್ತು ಇಂಟರ್‌ನೆಟ್ ಅನ್ನು ಒಂದೇ ಸಾಧನದಲ್ಲಿ ಸೇರಿಸಿ ಐಫೋನ್ ಸೃಷ್ಟಿಸಿದರು. ಇದು ತಾಂತ್ರಿಕ ಸೃಜನಶೀಲತೆಯ ಮೂಲಕ ಮಾರುಕಟ್ಟೆಯ ದಿಕ್ಕನ್ನೇ ಬದಲಿಸಿದ ಪರಿಯಾಯಿತು. ಸೃಜನಶೀಲತೆಯು ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲೂ ಅಗತ್ಯ. ಕಲೆ, ವಿಜ್ಞಾನ, ಸಾಹಿತ್ಯ, ಉದ್ಯಮ ಇತ್ಯಾದಿ ಎಲ್ಲೆಡೆ ಇದು ಹೊಸ ದಾರಿಗಳನ್ನು ತೆರೆದಿಡುತ್ತದೆ. ಸೃಜನಶೀಲ ವ್ಯಕ್ತಿ ಸಮಸ್ಯೆಗಳನ್ನು ಅಡೆತಡೆಯಾಗಿ ನೋಡದೆ, ಅವಕಾಶವಾಗಿ ನೋಡುತ್ತಾನೆ. ಈ ರೀತಿಯ ಚಿಂತನೆಯೂ ಸಹ ಸೃಜನಶೀಲತೆಯ ಮತ್ತೊಂದು ಮುಖವಾಗಿದೆ. ನಿಯಮಗಳನ್ನು ಮೀರಿ ನಿಜವಾದ ಅನುಭವವನ್ನು ವ್ಯಕ್ತಪಡಿಸುವ ಧೈರ್ಯವೇ ಸೃಜನಶೀಲತೆಯ ಮೂಲ ತತ್ವವಾಗಿದೆ.



**ಪೋಷಕ ಅಂಶಗಳು:** ಸೃಜನಶೀಲತೆ ಎನ್ನುವುದು ಕೇವಲ ಹುಟ್ಟಿನಿಂದ ಬರುವ ಗುಣವಲ್ಲ, ಅದನ್ನು ಸತತ ಪ್ರಯತ್ನದಿಂದ ಬೆಳೆಸಿಕೊಳ್ಳಬಹುದು.

**ಕುತೂಹಲ:** ಪ್ರಶ್ನಿಸುವ ಮನೋಭಾವವು ಸೃಜನಶೀಲತೆಯ ಮೊದಲ ಹೆಜ್ಜೆ. ಏಕೆ?, ಏನು? ಹೇಗೆ? ಎಂಬ ಪ್ರಶ್ನೆಗಳೇ ಹೊಸ ದಾರಿಗಳನ್ನು ತೋರಿಸುತ್ತವೆ. ಪ್ರಶ್ನೆಗಳ ಮೂಲಕ ಸೃಜನಶೀಲ ವ್ಯಕ್ತಿಯು ಹೊಸ ಚಿಂತನಾ ಲೋಕಕ್ಕೆ ಕಾಲಿಡುತ್ತಾನೆ. ಆ ಮೂಲಕ ನಾವೀನ್ಯತೆಯನ್ನು ಸೃಜಿಸುತ್ತಾನೆ. ಕುತೂಹಲವು ಸೃಜನಶೀಲ ವ್ಯಕ್ತಿಯನ್ನು ಕ್ರಿಯಾಶೀಲನನ್ನಾಗಿಸುತ್ತದೆ. ಸೃಜನಶೀಲ ವ್ಯಕ್ತಿಗೆ ವಿಫಲತೆಯ ಭಯವಿಲ್ಲದಿರುವುದು. ಸೋಲೇ ಗೆಲುವಿನ ಸೋಪಾನ ಎಂದು ಭಾವಿಸುತ್ತಾನೆ. ಸೋಲಿಗೆ ಹೆದರುವವನು ಹೊಸತನ್ನು ಪ್ರಯೋಗಿಸಲು ಹಿಂಜರಿಯುತ್ತಾನೆ. ಧೈರ್ಯವು ಮುಖ್ಯವಾಗಿ ಬೇಕಾಗುತ್ತದೆ. ಥಾಮಸ್ ಅಲ್ವಾ ಎಡಿಸನ್ ಬಲ್ಬ್ ಸಂಶೋಧಿಸುವ ಮೊದಲು ಸಾವಿರಾರು ಬಾರಿ ಸೋತರು, ಆದರೆ ಆ ಸೋಲುಗಳೇ ಅವರಿಗೆ ಸೃಜನಶೀಲ ಮಾರ್ಗಗಳನ್ನು ಕಲಿಸಿದವು. ಸೃಜನಶೀಲ ವ್ಯಕ್ತಿತ್ವ ಬೆಳೆಸಿಕೊಳ್ಳಲು ಕೇವಲ ಕಲ್ಪನೆ ಇದ್ದರೆ ಸಾಲದು, ಅದನ್ನು ಕಾರ್ಯರೂಪಕ್ಕೆ ತರುವ ಶ್ರದ್ಧೆ ಇರಬೇಕು. ಸೃಜನಶೀಲತೆಯು ಶೇ. 1 ರಷ್ಟು ಸ್ಫೂರ್ತಿಯಾದರೆ, ಶೇ.99 ರಷ್ಟು ಪರಿಶ್ರಮವಾಗಿರುತ್ತದೆ. ಸೃಜನಶೀಲತೆಯು ಅನುವರ್ತನೆಗಿಂತ ಭಿನ್ನತೆಯನ್ನು ಹೊಂದಿರುತ್ತದೆ. ಎಲ್ಲರೂ ಯೋಚಿಸುವ ಹಾದಿಯಲ್ಲಿ ಯೋಚಿಸದೆ, ಪರ್ಯಾಯ ಮಾರ್ಗಗಳ ಬಗ್ಗೆ ಚಿಂತಿಸುವುದು. ನಿರಂತರವಾಗಿ ಹೊಸ ವಿಷಯಗಳನ್ನು ಕಲಿಯುವುದು ಮೆದುಳಿಗೆ ಹೊಸ ಯೋಚನಾ ಶಕ್ತಿಯನ್ನು ನೀಡುತ್ತದೆ. ಸೃಜನಶೀಲತೆ ಒಂದು ಉಡುಗೊರೆ ಮಾತ್ರವಲ್ಲ; ಅದು ಅಭ್ಯಾಸದಿಂದ ಬೆಳೆಯುವ ಕಲೆ. ನಾವು ನೋಡುತ್ತಿರುವ ಪ್ರಪಂಚವನ್ನು ಹೊಸ ಕಣ್ಣಿನಿಂದ ನೋಡುವಾಗ, ಪ್ರತಿಯೊಂದು ಕ್ಷಣವೂ ಸೃಜನಶೀಲತೆಯ ಹೊಸ ಕಥೆಯಾಗುತ್ತದೆ. ವೈವಿಧ್ಯಮಯವಾಗಿ ಓದುವ ಮೂಲಕ ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗದೆ ಇತಿಹಾಸ, ವಿಜ್ಞಾನ, ಕಲೆ ಹೀಗೆ ಎಲ್ಲ ವಿಷಯಗಳ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಜ್ಞಾನದ ವಿಸ್ತಾರವೇ ಸೃಜನಶೀಲತೆಯ ಇಂಧನ. ಉತ್ತಮ ಚಿಂತಕರೊಂದಿಗೆ ಕಾಲ ಕಳೆಯುವುದು ನಮ್ಮ ಆಲೋಚನಾ ಕ್ರಮವನ್ನು ಉನ್ನತೀಕರಿಸುತ್ತದೆ. ನಕಾರಾತ್ಮಕ ವಿಚಾರಗಳನ್ನು ಬದಿಗಿಟ್ಟು ಸದಾ ಕ್ರಿಯಾಶೀಲವಾಗಿರುವುದನ್ನು ರೂಢಿಸಿಕೊಳ್ಳುವುದು ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ಸೃಜನಶೀಲತೆ ಹೆಚ್ಚಿಸಿಕೊಳ್ಳಲು ಬಹಳಷ್ಟು ಸಾಧಕರ ಜೀವನದ ಪಾಠ ನಮಗೆ ಸಹಾಯಕವಾಗುತ್ತದೆ. ಗೌತಮ ಬುದ್ಧ, ಮಹಾತ್ಮ ಗಾಂಧೀಜಿ ಮತ್ತು ಎಪಿಜೆ ಅಬ್ದುಲ್ ಕಲಾಂ ಅವರಂತಹ ಸಾಧಕರನ್ನು ಗಮನಿಸಿದರೆ, ಅವರು ಸಾಮಾನ್ಯ ಜನರಿಗಿಂತ ಭಿನ್ನವಾಗಿ ಯೋಚಿಸಿದ್ದರಿಂದಲೇ ಇತಿಹಾಸದಲ್ಲಿ ಉಳಿಯುವಂತಹ ಗುರಿಯನ್ನು ತಲುಪಲು ಸಾಧ್ಯವಾಯಿತು. ಅವರು ಹಳೆಯ ಸಂಪ್ರದಾಯ ಅಥವಾ ಸೋಲಿನ ಭಯಕ್ಕೆ ಕಟ್ಟುಬೀಳದೆ, ಹೊಸ ಆಲೋಚನೆಯ ಹಾದಿಯಲ್ಲಿ ಮುಂದುವರಿದರು.

**ಜೀವನ ಕ್ರಮದ ದಿವ್ಯ ಶಕ್ತಿ:** ಸೃಜನಶೀಲತೆ ಎಂಬುದು ಕೇವಲ ಪ್ರತಿಭೆಯಲ್ಲ, ಅದು ಜೀವನವನ್ನು ಧೈರ್ಯದಿಂದ ಎದುರಿಸುವ ಒಂದು ವಿಶಿಷ್ಟ ದೃಷ್ಟಿಕೋನ. ನಾವು ಮಾಡುವ ಪ್ರತಿಯೊಂದು ಸಣ್ಣ ಕೆಲಸದಲ್ಲೂ ಹೊಸತನವನ್ನು ತುಂಬುವುದು ಸೃಜನಶೀಲತೆಯ ಲಕ್ಷಣ. ಅಂತರಂಗದ ಶುದ್ಧಿ ಮತ್ತು ಸೃಜನಶೀಲತೆ ಸದಾ ಒಂದಾಗಿದ್ದರೆ, ವ್ಯಕ್ತಿಯು ಕ್ರಿಯಾಶೀಲನಾಗುತ್ತಾನೆ. ಸೃಜನಶೀಲತೆ ಹೊಮ್ಮುವುದು ಪ್ರಶಾಂತವಾದ ಮನಸ್ಸಿನಿಂದ ಮಾತ್ರ. ಚಂಚಲತೆಯ ಸರೋವರದಲ್ಲಿ ಬಿಂಬಗಳು ಸರಿಯಾಗಿ ಕಾಣಿಸುವುದಿಲ್ಲ; ಹಾಗೆಯೇ ಅಸ್ಥಿರ ಮನಸ್ಸಿನಲ್ಲಿ ಹೊಸ ಆಲೋಚನೆಗಳು ಮೂಡಲಾರವು. ಮನಸ್ಸು ಎಷ್ಟು ನಿರ್ಮಲವಾಗಿರುತ್ತದೆಯೋ, ಅಷ್ಟು ಸ್ಪಷ್ಟವಾದ ಮತ್ತು ಸತ್ವಯುತವಾದ ವಿಚಾರಗಳು ಮೂಡುತ್ತವೆ. ನಮ್ಮ ಅಂತರಂಗದ ಶಕ್ತಿಯನ್ನು ಕೇಂದ್ರೀಕರಿಸಿದಾಗ, ಸಾಮಾನ್ಯ ವಿಚಾರಗಳೂ ಅಸಾಮಾನ್ಯ ರೂಪವನ್ನು ಪಡೆದುಕೊಳ್ಳುತ್ತವೆ. ಸೃಜನಶೀಲತೆ ಎಂದರೆ ಹೊರಗಿನ ವಿಶ್ವವನ್ನು ಬದಲಾಯಿಸುವುದಕ್ಕಿಂತ ಮೊದಲು ನಮ್ಮ ಒಳಗಿನ ವಿಶ್ವವನ್ನು ಬದಲಾಯಿಸುವ ಪ್ರಕ್ರಿಯೆ. ಅದು ನಮ್ಮ ಚಿಂತನೆಗೆ ಹೊಸ ದಿಕ್ಕನ್ನು ನೀಡುತ್ತದೆ. ಸಾಮಾನ್ಯ ಜೀವನವನ್ನೇ ಅಸಾಮಾನ್ಯವಾಗಿಸುತ್ತದೆ. ಆತ್ಮವಿಶ್ವಾಸವೇ ಸೃಜನಶೀಲತೆಯ ಅಡಿಪಾಯವೆಂದೂ ಹೇಳಲಾಗುತ್ತದೆ. ನಾನು ಏನನ್ನಾದರೂ ಹೊಸದನ್ನು ಮಾಡಬಲ್ಲೆ ಎಂಬ ನಂಬಿಕೆಯೇ ಸೃಜನಶೀಲತೆಯ ಉಸಿರಾಗಿರುತ್ತದೆ.

ಲೋಕರೂಢಿಯ ಹಾದಿಯನ್ನು ಬಿಟ್ಟು ಹೊಸ ದಾರಿಯಲ್ಲಿ ನಡೆಯಲು ಧೈರ್ಯ ಬೇಕು. ಅನೇಕ ಮಹಾನ್ ವ್ಯಕ್ತಿಗಳು ಆರಂಭದಲ್ಲಿ ಟೀಕೆಗೆ ಒಳಗಾದವರೇ ಆಗಿದ್ದಾರೆ. ಅಂದ ಮಾತ್ರಕ್ಕೆ ಅವರ ಕಾರ್ಯ ವೈಖರಿ ನಿಲ್ಲಲಿಲ್ಲ. ತಮ್ಮ ಆಲೋಚನೆಯ ಮೇಲೆ ಅವರಿಗಿದ್ದ ಅಚಲವಾದ ವಿಶ್ವಾಸ ಅವರನ್ನು ಇತಿಹಾಸದ ಪುಟಗಳಲ್ಲಿ ದಾಖಲಿಸಿತು. ನೆನಪಿಡಿ, ಜಗತ್ತಿನ ಪ್ರತಿಯೊಂದು ದೊಡ್ಡ ಬದಲಾವಣೆಯೂ ಮೊದಲು ಒಬ್ಬನ ತಲೆಯಲ್ಲಿ ಮೂಡಿದ ಪುಟ್ಟ ಕಲ್ಪನೆಯೇ ಆಗಿರುತ್ತದೆ. ಸೃಜನಶೀಲತೆಗೆ ಮಿತಿಗಳನ್ನು ಮೀರಿ ಯೋಚಿಸುವ ಕಲೆ ಇರುತ್ತದೆ. ನಮಗೆ ನಾವೇ ಹಾಕಿಕೊಂಡಿರುವ ಮಿತಿಗಳೇ ನಮ್ಮ ಸೃಜನಶೀಲತೆಯ ದೊಡ್ಡ ಶತ್ರುಗಳು. ನನಗೆ ಇಷ್ಟೇ ಸಾಧ್ಯ ಅಥವಾ ನಾನು ಈ ವಯಸ್ಸಿನಲ್ಲಿ ಏನು ಮಾಡಬಲ್ಲೆ? ಎಂಬ ನಕಾರಾತ್ಮಕ ಯೋಚನೆಗಳನ್ನು ಕಿತ್ತೊಗೆಯಬೇಕು. ಸೃಜನಶೀಲತೆಗೆ ವಯಸ್ಸಿನ ಅಥವಾ ಜ್ಞಾನದ ಮಿತಿ ಇಲ್ಲ; ಅದಕ್ಕೆ ಬೇಕಿರುವುದು ಕೇವಲ ಬತ್ತದ ಉತ್ಸಾಹ ಅಷ್ಟೇ. ದೃಷ್ಟಿಕೋನ ಬದಲಾದರೆ ಸೃಷ್ಟಿಯೇ ಬದಲಾಗುತ್ತದೆ. ಹಳೆಯ ಹಾದಿಯಲ್ಲಿಯೇ ನಡೆಯುತ್ತಾ ಹೋದರೆ ಹೊಸ ತಾಣವನ್ನು ತಲುಪಲು ಸಾಧ್ಯವಿಲ್ಲ. ಹಾಗೆಯೇ, ಹಳೆಯ ಪೂರ್ವಾಗ್ರಹ ಪೀಡಿತ ಆಲೋಚನೆಗಳನ್ನು ಇಟ್ಟುಕೊಂಡು ಉನ್ನತ ಜೀವನವನ್ನು ನಿರೀಕ್ಷಿಸುವುದು ತಪ್ಪು. ಸೃಜನಶೀಲತೆಗೆ ಸಕಾರಾತ್ಮಕ ಮನೋಭಾವ ಅಗತ್ಯವಾಗಿರಬೇಕು. ಸಂಕಷ್ಟ ಬಂದಾಗ ನನಗೇಕೆ ಹೀಗಾಯಿತು? ಎಂದು ಕೊರಗುವ ಬದಲು ಇದು ನನಗೆ ಏನು ಕಲಿಸಲು ಬಂದಿದೆ? ಎಂದು ಯೋಚಿಸಿದರೆ ಜೀವನದ ಗುರಿ ಬದಲಾಗುತ್ತದೆ. ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬಂದು ಯೋಚಿಸಿದಾಗ ಮಾತ್ರ ಹೊಸ ಆವಿಷ್ಕಾರಗಳು ಮತ್ತು ಸಾಧನೆಗಳು ಸಾಧ್ಯವಾಗುತ್ತದೆ. ಸೃಜನಶೀಲತೆಗೆ ಮನೋಭಾವ ಮತ್ತು ಗುರಿ ಮುಖ್ಯವಾಗುತ್ತದೆ. ನಮ್ಮ ಗುರಿಯು ಆಲೋಚನೆಯ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಯೋಚನೆಯಲ್ಲಿ ಸ್ಪಷ್ಟತೆ ಇದ್ದರೆ, ಗುರಿಯತ್ತ ನಡೆಯುವ ದಾರಿಯಲ್ಲಿ ಎಷ್ಟೇ ಅಡೆತಡೆಗಳಿದ್ದರೂ ಮನಸ್ಸು ಧೃತಿಗೆಡುವುದಿಲ್ಲ. ಚಿಕ್ಕ ಚಿಕ್ಕದಾಗಿ ಯೋಚನೆ ಮಾಡುವುದನ್ನು ಬಿಟ್ಟು ವಿಶಾಲ ಚಿಂತನೆಗಳನ್ನು ಮೈಗೂಡಿಸಿಕೊಂಡು ಮುಂದುವರಿಯಬೇಕು. ಕೇವಲ ಅಸ್ತಿತ್ವಕ್ಕಾಗಿ ಬದುಕುವುದನ್ನು ಬಿಡಬೇಕು. ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶದೊಂದಿಗೆ ಬದುಕಬೇಕು. ಯಾವಾಗ ಯೋಚನೆಯ ವ್ಯಾಪ್ತಿ ವಿಸ್ತಾರವಾಗುತ್ತದೆಯೋ, ಆಗ ಜೀವನದ ಉದ್ದೇಶವೂ ಉನ್ನತವಾಗುತ್ತದೆ.

**ದೈನಂದಿನ ಜೀವನದಲ್ಲಿ:** ಸೃಜನಶೀಲತೆ ಎಂದರೆ ಕೇವಲ ದೊಡ್ಡ ಗ್ರಂಥ ಬರೆಯುವುದಲ್ಲ. ಸಮಸ್ಯೆ ಬಂದಾಗ ಕುಸಿಯದೆ, ಅದನ್ನು ಪರಿಹರಿಸಲು ಭಿನ್ನವಾದ ದಾರಿ ಹುಡುಕುವುದು ಸೃಜನಶೀಲತೆ. ಬೋಧನೆಯಲ್ಲಿ ತೊಡಗಿರುವ ಶಿಕ್ಷಕರು ವಿಷಯವನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಬಳಸುವ ಹೊಸ ವಿಧಾನ ಸೃಜನಶೀಲತೆ. ಸರಳವಾದ ಮಾತುಗಳ ಮೂಲಕ ಸುಂದರವಾದ ಕವಿತೆ ಅಥವಾ ಕಥೆ ಕಟ್ಟುವುದು ಸೃಜನಶೀಲತೆಯಾಗಿದೆ. ಸಮಕಾಲೀನ ಜಗತ್ತಿನಲ್ಲಿ ಸೃಜನಶೀಲತೆಯ ಮಹತ್ವ ಬಹಳಷ್ಟಿದೆ. ಇಂದಿನ ಕೃತಕ ಬುದ್ಧಿಮತ್ತೆ ಮತ್ತು ಯಾಂತ್ರೀಕೃತ ಯುಗದಲ್ಲಿ, ಮನುಷ್ಯನನ್ನು ಯಂತ್ರದಿಂದ ಬೇರ್ಪಡಿಸುವ ಏಕೈಕ ಅಂಶವೆಂದರೆ ಸೃಜನಶೀಲತೆ. ಯಂತ್ರಗಳು ದತ್ತಾಂಶವನ್ನು ವಿಶ್ಲೇಷಿಸಬಲ್ಲವು, ಆದರೆ ಅವುಗಳಿಗೆ ಮಾನವ ಸಹಜವಾದ ಅಂತಃಪ್ರಜ್ಞೆ ಮತ್ತು ಭಾವನಾತ್ಮಕ ಸೃಜನಶೀಲತೆ ಇರುವುದಿಲ್ಲ. ಸೃಜನಶೀಲತೆ ಕೇವಲ ಹೊಸತನ್ನು ಸೃಷ್ಟಿಸುವುದಲ್ಲ, ಅಸ್ತವ್ಯಸ್ತವಾಗಿರುವ ವಿಷಯಗಳಲ್ಲಿ ಒಂದು ಸುಂದರವಾದ ಕ್ರಮವನ್ನು ಕಂಡುಕೊಳ್ಳುವುದು.

ಸೃಜನಶೀಲತೆಯು ಮನುಕುಲದ ವಿಕಾಸದ ಎಂಜಿನ್ ಇದ್ದಂತೆ. ಬೆಂಕಿಯ ಆವಿಷ್ಕಾರವು ವಿಜ್ಞಾನವಾದರೆ ಚಕ್ರದ ಆವಿಷ್ಕಾರ ನಾಗರೀಕತೆಯಾಗಿದೆ. ಭಾಷೆಯ ಆವಿಷ್ಕಾರ ಸಂಸ್ಕೃತಿಯಾಗಿದೆ. ಒಟ್ಟಾರೆಯಾಗಿ ಎಲ್ಲದರಲ್ಲೂ ಸೃಜನಶೀಲತೆ ಕಾಲಮಾನಕ್ಕೆ ತಕ್ಕಂತೆ ಇದೆ. ಬೆಂಕಿಯ ಆವಿಷ್ಕಾರದಿಂದ ಹಿಡಿದು ಇಂದಿನ ಬಾಹ್ಯಾಕಾಶ ಯಾನದವರೆಗೆ ಎಲ್ಲವೂ ಸೃಜನಶೀಲ ಚಿಂತನೆಯ ಫಲಗಳೇ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದು ಸೃಜನಶೀಲ ಕಿಚ್ಚಿರುತ್ತದೆ. ಅದನ್ನು ಗುರುತಿಸಿ, ಪೋಷಿಸಿ, ಸಮಾಜದ ಹಿತಕ್ಕಾಗಿ ಬಳಸಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ನಮ್ಮ ಬದುಕು ಒಂದು ಸುಂದರವಾದ ಹಾಳೆ ಇದ್ದಂತೆ. ಅಲ್ಲಿ ಏನನ್ನು ಬರೆಯಬೇಕು, ಯಾವ ಚಿತ್ರ ಬಿಡಿಸಬೇಕು ಮತ್ತು ಯಾವ ಬಣ್ಣಗಳನ್ನು ಹಚ್ಚಬೇಕು ಎಂಬುದು ನಮ್ಮ ಸೃಜನಶೀಲತೆಗೆ ಬಿಟ್ಟ ನಿರ್ಧಾರವಾಗಿರುತ್ತದೆ. ಪ್ರತಿಯೊಂದು ದಿನದಲ್ಲಿಯೂ ಹೊಸದನ್ನು ಕಲಿಯಲು ಮತ್ತು ಸೃಷ್ಟಿಸುವ ಅವಕಾಶವಾಗಿ ನೋಡೋಣ. ಏಕೆಂದರೆ ಸೃಜನಶೀಲತೆಯೇ ಜಗತ್ತಿನ ಸಕಲ ಪ್ರಗತಿಯ ಮೂಲ ಮಂತ್ರ. ನಮ್ಮ ಸೃಜನಶೀಲ ಪಯಣ ನಿರಂತರವಾಗಿದ್ದು ಸಮಾಜಕ್ಕೆ ಬೆಳಕಾಗಲಿ.

**– ಕೆ.ಎನ್. ಚಿದಾನಂದ (ನಾನಂಚಿ),** ಹಾಸನ.

> » ಡಿವಿಜಿಯವರ ಕಾವ್ಯಾತ್ಮಕ ಸಾಲುಗಳನ್ನು ಚೈತನ್ಯ ತಂದುಕೊಳ್ಳುವ ಸಾಲುಗಳನ್ನಾಗಿ ಅರ್ಥೈಸಿ ಕೊಳ್ಳುವುದಕ್ಕೆ ಬಸ್ಸಿನಲ್ಲಿ ನಿರಾಳತೆ ಇರಬೇಕು. ಮುಖ್ಯವಾಗಿ ಸೀಟು ಸಿಗಬೇಕು. ಸೀಟು ಸಿಕ್ಕರೂ ನಾವು ಕುಳಿತಲ್ಲಿಂದ ಈ ಸಾಲುಗಳೆಡೆಗೆ ಕಣ್ಣುಹಾಯಿಸುವುದಕ್ಕೆ ಅವಕಾಶವಿರಬೇಕು. ಎಡಗಡೆಯ ಎರಡು ಸೀಟುಗಳು ಮತ್ತು ಬಲಬದಿಯ ಮೂರು ಸೀಟುಗಳ ಮಧ್ಯೆ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ನಿಂತುಕೊಂಡು ತೇಲಾಡುತ್ತಿರಬಾರದು.

# ಇರುವ ಭಾಗ್ಯ, ಇಲ್ಲದ ಹರುಷ: ಇದೇ ಹೊಸ ಸಾಲು!

ಭಾಗ್ಯವಿಧಾನ ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು ಹರುಷಕ್ಕಿದೆ ದಾರಿ... ಡಿವಿಜಿಯವರ ಈ ಸಾಲುಗಳು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಪ್ರಯಾಣಿಸುವವರಿಗೆ ಪರಿಚಿತ. ಈಗೀಗ ಈ ಸಾಲುಗಳು ಕೆಲವು ಬಸ್ಸುಗಳಲ್ಲಿ ಕಾಣಿಸುತ್ತಿಲ್ಲ. ಡ್ರೈವರ್ ಆಸನದ ಹಿಂಬದಿಯ ಮೇಲೆ ಕಾಣಿಸಿಕೊಂಡು, ಪ್ರಯಾಣಿಸುವ ಅವಧಿಯಷ್ಟೇ ಅಲ್ಲದೇ ಬದುಕಿನ ಯಾನದ ಸೌಂದರ್ಯ ಹೆಚ್ಚಿಸಬಹುದಾದ ತತ್ವದ ಪ್ರತೀಕವಾಗಿ ಕಂಗೊಳಿಸುವ ಈ ಸಾಲುಗಳು ಕೆಲವು ಬಸ್ಸುಗಳಲ್ಲಿ ಕಣ್ಮರೆಯಾಗಿವೆ. ಆದರೆ, ಅವುಗಳ ಕಾಣೆಯಾಗಿರುವಿಕೆ ಬಸ್ಸಿನಲ್ಲಿ ಹಿಂದೆ ಇದ್ದಿರಬಹುದಾದ ಹರುಷದ ಗೈರುಹಾಜರಿಯ ಸಂಕೇತವೂ ಹೌದು ಎನ್ನುವುದನ್ನು 2023ರ ನಂತರದ ಸರಕಾರಿ ಬಸ್ ಪ್ರಯಾಣ ದಿನನಿತ್ಯ ಸಾಬೀತುಪಡಿಸುತ್ತಲೇ ಇದೆ.

ಡಿವಿಜಿಯವರ ಕಾವ್ಯಾತ್ಮಕ ಸಾಲುಗಳನ್ನು ಚೈತನ್ಯ ತಂದುಕೊಳ್ಳುವ ಸಾಲುಗಳನ್ನಾಗಿ ಅರ್ಥೈಸಿ ಕೊಳ್ಳುವುದಕ್ಕೆ ಬಸ್ಸಿನಲ್ಲಿ ನಿರಾಳತೆ ಇರಬೇಕು. ಮುಖ್ಯವಾಗಿ ಸೀಟು ಸಿಗಬೇಕು. ಸೀಟು ಸಿಕ್ಕರೂ ನಾವು ಕುಳಿತಲ್ಲಿಂದ ಈ ಸಾಲುಗಳೆಡೆಗೆ ಕಣ್ಣುಹಾಯಿಸುವುದಕ್ಕೆ ಅವಕಾಶವಿರಬೇಕು. ಎಡಗಡೆಯ ಎರಡು ಸೀಟುಗಳು ಮತ್ತು ಬಲಬದಿಯ ಮೂರು ಸೀಟುಗಳ ಮಧ್ಯೆ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ನಿಂತುಕೊಂಡು ತೇಲಾಡುತ್ತಿರಬಾರದು.

ಅಷ್ಟೇ ಅಲ್ಲ, ಈಗಾಗಲೇ ಬಸ್ಸಿನಲ್ಲಿ ಕಾಲಿಡಲೂ ಜಾಗವಿಲ್ಲದಿದ್ದರೂ ಒಂದೊಂದು ಸ್ಟಾಪ್‌ನಿಂದ ಪ್ರಯಾಣಿಕರು ಭರ್ತಿಯಾಗುತ್ತಲೇ ಇರಬಾರದು. ಡ್ರೈವರ್ ಪಕ್ಕದ ಗೇರ್‌ಬಾಕ್ಸ್‌ನ ಮೇಲೆ ಆಟದ ಎಕ್ಸ್ಟ್ರಾ ಪ್ಲೇಯರ್‌ಗಳಂತೆ ಯಾರೂ ಕುಳಿತಿರಬಾರದು. ನಿಬಿಡತೆ ಹೆಚ್ಚಾಗುತ್ತಾ ಡಿವಿಜಿ ಸಾಲುಗಳ ಫಲಕವೇ ಮರೆಮಾಚುವ ಹಾಗೆ ಜನರು ಅಲ್ಲಿ ನಿಂತಿರಬಾರದು.

ಕರ್ನಾಟಕದ ಆಡಳಿತಾರೂಢ ಸರಕಾರ ಹೊಸ ನಾಯಕತ್ವ ಕಂಡುಕೊಂಡ ಸಂದರ್ಭವು ಬದಲಾವಣೆ ಕುರಿತ ರಚನಾತ್ಮಕ ಚಿಂತನೆಯನ್ನು ಗಟ್ಟಿಗೊಳಿಸಬೇಕಿದೆ. ಜನರಿಗೆ ಇಷ್ಟವಾಗಿ ಪ್ರಯೋಜನಕಾರಿಯಾಗಬಲ್ಲ ಯೋಜನೆಗಳನ್ನು ಸಾರ್ವಜನಿಕರೆಲ್ಲ ಹೃತ್ಪೂರ್ವಕವಾಗಿ ಸ್ವೀಕರಿಸುವ ಹಾಗೆ ಅನುಷ್ಠಾನ ಗೊಳಿಸುವಂಥ ರಚನಾತ್ಮಕತೆ ಜೀವ ತಳೆಯಬೇಕಿದೆ. ಇಲ್ಲದಿದ್ದರೆ ದುರ್ಬಲರ ಪರವಾಗಿ ರೂಪಿಸಲಾಗುವ ಎಲ್ಲಾ ಯೋಜನೆಗಳೂ ಖಜಾನೆಗೆ ಹೊರೆ ಎಂಬ ನೆಪ ಪ್ರಾಬಲ್ಯ ಪಡೆಯುತ್ತಾ ಹೋಗುತ್ತದೆ. ಜನಪರ ಯೋಜನೆಗಳ ರೂಪಿಸುವಿಕೆಯ ಪ್ರಕ್ರಿಯೆಯೇ ಜಟಿಲವಾಗುವ ಅಪಾಯವನ್ನು ಎದುರುಗೊಳ್ಳಬೇಕಾಗುತ್ತದೆ.

ಗ್ಯಾರಂಟಿ ಯೋಜನೆಗಳು ಅನರ್ಹರಿಗೆ ದಕ್ಕುತ್ತಿರುವುದರಿಂದ ಉಳಿದವರಿಗೆ ತೊಂದರೆಯಾಗುತ್ತಿದೆ ಎಂಬ ದುಮ್ಮಾನದಿಂದ, ಗ್ಯಾರಂಟಿ ಫಲಾನುಭವಿಗಳನ್ನು ಅಸ್ಪೃಶ್ಯರನ್ನಾಗಿ ನೋಡುವ ದೃಷ್ಟಿ ಕೋನ ವ್ಯಾಪಕವಾಗಿದೆ. ಕಡಿಮೆ ವಾಹನಗಳು, ಹೆಚ್ಚಿನ ಬೇಡಿಕೆಯಿಂದ ಎದುರಾಗಲಿರುವ ಪರಿಣಾಮ ಲೆಕ್ಕಿಸದೇ ಮಹಿಳೆಯರಿಗಾಗಿ ಉಚಿತ ಪ್ರಯಾಣದ ಭಾಗ್ಯವನ್ನು ಅವಸರವಸರವಾಗಿ ಕರುಣಿಸಿದ ಕಾರಣಕ್ಕಾಗಿಯೇ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್ ಮತ್ತು ಬಸ್ಸುಗಳು ಮನುಷ್ಯ ಯುದ್ಧದ ಮಹಾನ್ ಸ್ಯಾಂಪಲ್ಲುಗಳ ಹಾಗೆ ಗೋಚರಿಸುತ್ತಿರುವುದನ್ನು ಗಮನಿಸಬೇಕು.

ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸದೇ, ಇರುವಷ್ಟೇ ಬಸ್ಸುಗಳಲ್ಲೇ ಜನರನ್ನು ಪ್ರಾಣಿಗಳ ಹಾಗೆ ತುಂಬಿದರೆ ಅವರ್‍ಯಾರೂ ಬೇಜಾರು ಮಾಡಿಕೊಳ್ಳೋಲ್ಲ, ಬೇಜಾರು ಮಾಡಿಕೊಂಡವರು ತಮ್ಮ ಬೇಜಾರನ್ನು ಬಹಿರಂಗವಾಗಿ ಹೇಳಿಕೊಂಡರೆ ಅವರನ್ನು ಸ್ತ್ರೀ ವಿರೋಧಿ ಎಂಬ ಹಣೆಪಟ್ಟಿ ಕಟ್ಟಿ ಸುಮ್ಮನಿರಿಸಬಹುದು ಅಂತ ಪ್ರಭುತ್ವ ಮಾತ್ರವಲ್ಲ, ಫಲಾನುಭವಿ ಸ್ತ್ರೀಯರು ಮತ್ತು ಹೆಂಗರುಳಿನ ಹಲು ಮಾನವರೆಲ್ಲರೂ ಅಂದುಕೊಳ್ಳಬಹುದು. ಡಿವಿಜಿಯವರು ಇದ್ದುದರಲ್ಲಿಯೇ ಖುಷಿಪಟ್ಟು ಹರುಷದ ದಾರಿಯನ್ನು ಹುಡುಕೊಳ್ಳುವಂತಹ ಚಿಂತನೆಯನ್ನು ಆಧರಿಸಿಕೊಂಡಿದ್ದಿರಬಹುದು.

ಆದರೆ, ಕೆಎಸ್‌ಆರ್‌ಟಿಸಿ ಬಸ್ಸುಗಳು, ಡ್ರೈವರ್‌ಗಳು ಮತ್ತು ಕಂಡಕ್ಟರ್‌ಗಳ ಕರ್ತವ್ಯ ನಿರ್ವಹಣೆಯ ಇಬ್ಬಂದಿತನವನ್ನು ನೋಡಿದರೆ ಹರುಷ ಅವರ ಪಾಲಿಗಷ್ಟೇ ಅಲ್ಲ, ಸಮಸ್ತ ಪ್ರಯಾಣಿಕರ ಬದುಕಿನ ವ್ಯಾಪ್ತಿ ಪ್ರದೇಶದಿಂದ ಹೊರಗಿರುವ ಸತ್ಯ ಕಣ್ಣಿಗೆ ರಾಚುತ್ತದೆ. ಪ್ರಯಾಣಿಕರಾಗಿ ನಿಮ್ಮೊಳಗೆ ಅಗಾಧ ಸಹನೆ, ಮೌನವನ್ನು ರೂಪಿಸಿಕೊಂಡು ಕುಳಿತು ಹರುಷದ ದಾರಿಯ ಕುರಿತಾದ ಆಶಾವಾದ ತಂದುಕೊಳ್ಳುವಾಗ ಸೀಟಿಗಾಗಿ ನಡೆಯುವ ಘೋರ ವಾಗ್ಯುದ್ಧಗಳ ಏರುಧ್ವನಿಗಳನ್ನು ಕೇಳಿಸಿಕೊಳ್ಳಬೇಕಾಗುತ್ತದೆ. ಅವುಗಳನ್ನು ಆಲಿಸುತ್ತಾ ಇದೇ ಭಾಗ್ಯ ಎಂದುಕೊಂಡು ಮತ್ತೊಂದಿಷ್ಟು ಸಹನೆಯ ತುಂಡುಗಳನ್ನು ಎದೆಗಿಳಿಸಿಕೊಳ್ಳಬೇಕು.

ಡ್ರೈವರ್ ಮತ್ತು ಕಂಡಕ್ಟರ್ ಎಂಬ ಎರಡು ಜೀವಗಳು ಹೆಣಗಾಡುತ್ತಿರುವ ಸ್ಥಿತಿಯನ್ನು ಕಣ್ತುಂಬಿಕೊಳ್ಳುತ್ತಾ ಮೇರಾ ಕರ್ನಾಟಕ್ ಮಹಾನ್ ಎಂಬ ಹೆಮ್ಮೆಯ ಭಾವ ತಂದುಕೊಳ್ಳಬೇಕು. ಮಗು ಎತ್ತಿಕೊಂಡು ನಿಂತ ತಾಯಿಯೊಬ್ಬಳು ಸೀಟಲ್ಲಿ ಕುಳಿತ ಮೂವರು ಹೆಣ್ಣುಮಕ್ಕಳೆಡೆಗೆ ಕಣ್ಣು ಹಾಯಿಸಿ ನಿಮಗೆ ಮನುಷ್ಯತ್ವ ಇದೆಯಾ? ಮಗುವನ್ನು ಎತ್ತಿಕೊಂಡು ನಿಂತಿದ್ದೇನೆ. ಸೀಟು ಬಿಟ್ಟು ಕೊಡುವ ಮನಸ್ಸೇ ಮಾಡುತ್ತಿಲ್ಲವಲ್ಲ ನೀವು ಎಂಬ ಮಾತು ಕಿವಿಗಪ್ಪಳಿಸಿದಾಗ ಶಕ್ತಿ ಯೋಜನೆಯ ಮೂಲ ಆಶಯವೇ ತಲೆಕೆಳಗಾಗಿ ಬಸ್ಸಿನ ಚಕ್ರಗಳಡಿ ನಲುಗಿದಂತಾಗುತ್ತದೆ.

ಯೋಜನಾಬದ್ಧತೆಯ ಕೊರತೆಯ ಕಾರಣಕ್ಕಾಗಿಯೇ ಸೃಷ್ಟಿಯಾಗಿರುವ ಈ ಬಗೆಯ ಸಂಕಟ ದಿನದಿಂದ ದಿನಕ್ಕೆ ತರಹೇವಾರಿ ರೂಪ ಪಡೆಯುತ್ತಿರುವುದನ್ನು ನಮ್ಮ ಲೀಡರುಗಳು ಕಣ್ಣುಗಳಿಗೆ ಟುಕಿಸಿಕೊಳ್ಳಬೇಕು. ಪೂರ್ವಸಿದ್ಧತೆಯ ಸ್ಪರ್ಶವಿಲ್ಲದ ಯಾವುದೇ ಜನಪರ ಯೋಜನೆ ಸಾರ್ವಜನಿಕರೊಳಗಿನ ಹತಾಶೆಯನ್ನು ಹೆಚ್ಚಿಸುತ್ತಲೇ ಹೋಗುತ್ತದೆ ಎಂಬುದನ್ನು ಬಸ್ಸಿನೊಳಗಿನ ಶಕ್ತಿಯ ಸೈಡ್ ಎ-ಕ್ಟ್‌ಗಳ ಮೂಲಕ ಮನವರಿಕೆ ಮಾಡಿಕೊಳ್ಳಬೇಕು. ಕಾಲಿಡಲೂ ಜಾಗವಿಲ್ಲದ ಬಸ್ಸಿನಲ್ಲಿ ಹಿಂದಿನಿಂದ ಮುಂದಕ್ಕೆ ಮುಂದಿನಿಂದ ಹಿಂದಕ್ಕೆ ತೇಲಾಡಿ ಓಲಾಡಿ ಟಿಕೆಟ್ ಟಿಕೆಟ್ ಎಂದು ಓಡಾಡುವ ಕಂಡಕ್ಟರ್ ಕಸರತ್ತು ನೋಡುತ್ತಾ ಎದುರುಗೊಳ್ಳಬೇಕು.

ಡ್ರೈವರ್ ಸಡನ್ನಾಗಿ ಬ್ರೇಕ್ ಹಾಕಿದರೆ ಒಬ್ಬರ ಮೇಲೊಬ್ಬರು ಬಿದ್ದು ಕೆಲವರ ಮೌನದ ಸಿಟ್ಟು ಸೆಡವು, ಇನ್ನೂ ಕೆಲವರ ಗದರುವ ಆರ್ಭಟದ ಧ್ವನಿಗಳನ್ನು ಕೇಳಿಸಿಕೊಳ್ಳಬೇಕು. ಸರಿಯಾಗಿ ನಿಲ್ಲೋಕೆ ಆಗೊಲ್ವಾ ಎಂದು ಕುಳಿತವರು ಹೇಳಿದರೆ, ಇಲ್ಲೊಮ್ಮೆ ನಿಂತು ನೋಡಿ, ಆವಾಗ ಗೊತ್ತಾಗುತ್ತದೆ ಸರಿಯಾಗಿ ನಿಲ್ಲೋಕೆ ಆಗುತ್ತಾ ಇಲ್ಲವಾ ಅನ್ನೋದು ಎಂಬ ಸಂಭಾಷಣೆ ತಾರಕಕ್ಕೇರಿ ಜಾಗತಿಕ ಯುದ್ಧವನ್ನೂ ನಾಚಿಸುವ ಹೂಂಕಾರಗಳು ವ್ಯಕ್ತವಾಗುವ ಸಂದರ್ಭಗಳನ್ನು ನೋಡಬೇಕು. ಅಷ್ಟೇ ಅಲ್ಲ, ಜಗತ್ತಿನ ಎಲ್ಲಾ ಯುದ್ಧಗಳನ್ನೂ ಮೀರಿಸುವಂತಹ ಕೇಳರಿಯದಂತಹ ಅವಾಚ್ಯ ಶಬ್ದಾಸಗಳನ್ನು ಕಿವಿಗಪ್ಪಳಿಸಿಕೊಳ್ಳಬೇಕು.

ಅಂಥ ಗೊಡವೆಯೇ ನಮ್ಮ ಲೀಡರುಗಳಿಗೆ ಬೇಕಿಲ್ಲ. ಯಾಕೆಂದರೆ, ಅವರು ಮಾಧ್ಯಮಗಳ ಮುಂದೆ ಅಂಕಿ ಅಂಶಗಳನ್ನು ಪ್ರಸ್ತುತಪಡಿಸಿ ಹಿಂದಿನವರು ಸಾಧಿಸಿದ್ದಾದರೂ ಏನು? ಹಾಗೆ ನೋಡಿದರೆ ನಾವೇ ಅವರಿಗಿಂತ ಒಂದು ಹೆಜ್ಜೆ ಮುಂದೆ ಇದ್ದೇವೆ ಎಂಬ ಬೀಗುವಿಕೆ ಬಿಟ್ಟರೆ ಬೇರೇನನ್ನೂ ಲೀಡರುಗಳಿಂದ ನಿರೀಕ್ಷಿಸಲಾಗದು. ಅವರು ಯಾವಾಗಲೂ ಇಂಥದ್ದೊಂದು ಸಮಸ್ಯೆ ಇದೆಯಲ್ಲಾ ಎಂದರೆ ಸಮಜಾಯಿಷಿ ನೀಡುವ ಹುಮ್ಮಸ್ಸಿನೊಂದಿಗೇ ಪ್ರತ್ಯಕ್ಷರಾಗುತ್ತಾರೆ.

ಇತ್ತೀಚೆಗಷ್ಟೇ ಮಾಧ್ಯಮಗಳ ಮೂಲಕ ಕಣ್ಣಿಗೆಟುಕಿದ, ಕಿವಿಗಪ್ಪಳಿಸಿದ ಈ ಸರಕಾರಿ ಅಂಕಿಅಂಶಗಳು ಬಸ್ಸಿನೊಳಗಿನ ಪ್ರಯಾಣಿಕರ ಇಕ್ಕಟ್ಟು, ಬಿಕ್ಕಟ್ಟು, ಜಗಳಗಳೊಂದಿಗೆ ಜುಗಲ್ಬಂದಿ ನಡೆಸುತ್ತಿರುವಂತೆ ಭಾಸವಾಗುತ್ತದೆ. ಹಿಂದಿನವರು 4 ಸಾವಿರ ಕೋಟಿ ಸಾಲ ಬಿಟ್ಟು ಹೋಗಿದ್ದರು. ನಮ್ಮ ಸರಕಾರ ಬಂದ ನಂತರ 7800 ಬಸ್ ಖರೀದಿ ಮಾಡಿದೆವು.

ಹೊಸ ಬಸ್‌ಗಳನ್ನು ಖರೀದಿಸಿರಲಿಲ್ಲ ಹಿಂದಿನವರು. ಹಿಂದಿನವರು ನೌಕರರ ನೇಮಕಾತಿ ಪೂರ್ಣ ಗೊಳಿಸಿರಲಿಲ್ಲ. ನಾವು 9 ಸಾವಿರ ನೌಕರರನ್ನು ನೇಮಿಸಿಕೊಂಡೆವು. 1450 ಜನರನ್ನು ಅನುಕಂಪದ ಆಧಾರದಲ್ಲಿ ನೇಮಿಸಿದೆವು. ಈ ಬಗೆಯ ಸಮಜಾಯಿಷಿ ಮಾತುಗಳು ಕೇಳುವಾಗ ಒತ್ತಾಯ ಪೂರ್ವಕವಾಗಿ ಹರುಷವನ್ನು ತಂದುಕೊಟ್ಟಂತಾಗುತ್ತದೆ. ತಕ್ಷಣವೇ ಬಸ್ಸಿನೊಳಗಿನ ಪ್ರವರಗಳನ್ನು ನೆನಪಿಸಿಕೊಂಡಾಗ ಬೇರೆಯದ್ದೇ ಆದ ದಾರುಣ ಅನುಭವದ ಕಥೆಗಳು ತೆರೆದುಕೊಳ್ಳುತ್ತವೆ.

ಇನ್ನು ವಿರೋಧ ಪಕ್ಷಗಳ ಧ್ವನಿಗಳನ್ನು ಕೇಳಿದರಂತೂ ರಾಜಕೀಯದ ಸಂಕುಚಿತ ಪ್ರಯಾಣ ಎಷ್ಟು ಕಠೋರ ಎಂದೆನ್ನಿಸಿಬಿಡುತ್ತದೆ. ದುರ್ಬಲರಲ್ಲಿ ಅವಲಂಬನೆಯ ಗೀಳು ಹಚ್ಚಿಬಿಟ್ಟಿರಿ ಅನ್ನುತ್ತಲೇ ತಾರ್ಕಿಕ ಹುಡುಕಾಟದ ಪ್ರಯತ್ನಗಳನ್ನೇ ಹತ್ತಿಕ್ಕಿಕೊಳ್ಳುವ ವಿರೋಧ ಪಕ್ಷಗಳ ಅಭಿಪ್ರಾಯಗಳು ಇಡೀ ಸಮಾಜವನ್ನು ಅಸಮಾನತೆಯ ಕೂಪದೊಳಗೇ ಬಂಧಿಸಿಡುವ ವಿತಂಡವಾದಗಳಂತೆನ್ನಿಸುತ್ತವೆ.

ಬಸ್ಸುಗಳ ಸಂಖ್ಯೆ ಹೆಚ್ಚಿಸಿದರೂ ಬಸ್‌ಗಳು ಮತ್ತು ಬಸ್‌ಸ್ಟ್ಯಾಂಡ್‌ನೊಳಗಿನ ವಾಗ್ಯುದ್ಧಗಳು ನಿಲ್ಲುತ್ತಿಲ್ಲವಲ್ಲ? ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮೊದಲಿದ್ದ ಹರುಷ ಕಾಣಿಸುತ್ತಿಲ್ಲವಲ್ಲ? ಉಚಿತ ಫಲಾನುಭವಿಗಳಿಗೆ ಶಕ್ತಿಯ ಭಾಗ್ಯ ಒದಗಿಸಿಕೊಟ್ಟೂ ಬಸ್ ಪ್ರಯಾಣವನ್ನು ಹರುಷದಾಯಕವಾಗಿಸುವ ದಾರಿಗಳನ್ನು ಹುಡುಕಬಹುದಿತ್ತಲ್ಲಾ? ಅಂಥ ಹುಡುಕಾಟ ಇಲ್ಲಿಯವರೆಗೆ ನಡೆಯಲೇ ಇಲ್ಲ. ಅದಕ್ಕೆ ಬದಲಾಗಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ನ ಅನೌನ್ಸ್‌ಮೆಂಟೂ ಆಗಿಬಿಟ್ಟಿದೆ.




ಬೆಳಿಗ್ಗೆ ಮತ್ತು ಸಂಜೆಯ ಪ್ರಯಾಣಿಕ ದಟ್ಟಣೆಯ ಜೊತೆಗೆ ಈ ಹೊಸ ಫಲಾನುಭವಿಗಳ ಸೇರ್ಪಡೆ ಸಂದರ್ಭಗಳನ್ನು ಮೊದಲೇ ಊಹಿಸಿಕೊಂಡು ಡ್ರೈವರ್ ಮತ್ತು ಕಂಡಕ್ಟರ್‌ಗಳು ತಮ್ಮ ದಿನನಿತ್ಯದ ಕರ್ತವ್ಯ ನಿರ್ವಹಣೆಯ ಲಯವನ್ನು ಮರುರೂಪಿಸಿಕೊಳ್ಳಬೇಕು. ಬೆಳಿಗ್ಗೆ ಮತ್ತು ಸಂಜೆಯ ಅವಧಿಯಲ್ಲಿ ಪ್ರಯಾಣಿಸುವವರೂ ಇನ್ನೊಂದು ಬಗೆಯ ದಟ್ಟಣೆಯ ದೃಶ್ಯಾವಳಿಗಳನ್ನು ಕಲ್ಪಿಸಿಕೊಂಡು ಮಾನಸಿಕವಾಗಿ ಸನ್ನದ್ಧಗೊಳ್ಳಬೇಕು.

ಆಡಳಿತ ನಡೆಸುವ ಕಾರ್ಯಾಂಗದ ಪ್ರತಿಭಾನ್ವಿತ ಅಧಿಕಾರಿಗಳು, ಅನುಭವಿ ಮಂತ್ರಿಗಳು, ಸಲಹೆ ನೀಡುವ ತಜ್ಞರು ಇದ್ದೂ ಇಂಥದ್ದೊಂದು ಸಂದಿಗ್ಧತೆ ಏಕೆ ಎಂಬ ಪ್ರಶ್ನೆಗೆ ಸದ್ಯಕ್ಕಂತೂ ಉತ್ತರ ದೊರಕುವ ಲಕ್ಷಣಗಳಿಲ್ಲ. ಇಂತಹ ಜನಪ್ರಿಯ ಯೋಜನೆಗಳು ಫಲಾನುಭವಿಗಳಿಗೆ ಪ್ರಯೋಜನ ಒದಗಿಸಿಕೊಡುವುದರ ಜೊತೆಗೆ ಬಿಕ್ಕಟ್ಟುಗಳನ್ನೂ ಸೃಷ್ಟಿಸುವುದಕ್ಕೆ ಸಕಾರಣಗಳಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು.

ಹಾಗಾದರೆ ಶಾಶ್ವತ ಪರಿಹಾರದ ದಾರಿ ಯಾವುದು? ರಾಜ್ಯದಾದ್ಯಂತ ಬಸ್ ಸಂಖ್ಯೆ ಒಟ್ಟುಗೂಡಿಸಿ ಶಕ್ತಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಪರಿಗಣಿಸಿ ಪರಿಹಾರ ಸೂತ್ರ ಕಂಡುಕೊಳ್ಳಬೇಕು. ಶಕ್ತಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಪರಿಗಣಿಸಿ ಜಿಲ್ಲಾವಾರು ಮೀಸಲು ಬಸ್‌ಗಳನ್ನು ನಿಗದಿ ಪಡಿಸಬೇಕು.

ಉದಾಹರಣೆಗೆ ಜಿಲ್ಲೆಯೊಂದರಲ್ಲಿ ಪ್ರಯಾಣಿಸುವ ಒಟ್ಟು ಬಸ್ಸುಗಳ ಸಂಖ್ಯೆ 600 ಇದ್ದರೆ ಅವುಗಳಲ್ಲಿ ನೂರು ಬಸ್ಸುಗಳನ್ನು ಅಥವಾ ಅಗತ್ಯಕ್ಕನುಗುಣವಾದ ಲೆಕ್ಕಾಚಾರ ಅನ್ವಯಿಸಿ ಮಹಿಳಾ ಪ್ರಯಾಣಿಕರಿಗಾಗಿಯೇ ಬಸ್ಸುಗಳನ್ನು ಮೀಸಲಿರಿಸಬೇಕು.

ರಾಜಧಾನಿ ಅಥವಾ ಜಿಲ್ಲಾ ಕೇಂದ್ರಗಳಿಗೆ ಪ್ರಯಾಣಿಸುವ ಒಟ್ಟು ಸಂಖ್ಯೆಯಲ್ಲಿ ಇಂತಿಷ್ಟು ಬಸ್ಸುಗಳನ್ನು ಶಕ್ತಿ ಫಲಾನುಭವಿಗಳಿಗೆ ಮೀಸಲಿರಿಸಬೇಕು. ಆ ಫಲಾನುಭವಿಗಳು ಆ ಬಸ್ಸುಗಳಲ್ಲಿ ಮಾತ್ರ ಪ್ರಯಾಣಿಸಬೇಕು. ಆ ಮೂಲಕ ಸುಸ್ಥಿರ ಆದಾಯದ ಸಾಧ್ಯತೆಯನ್ನೂ ಕೆಎಸ್‌ಆರ್‌ಟಿಸಿ ಹೆಚ್ಚಿಸಿಕೊಂಡು ಇರುವ ಭಾಗ್ಯಗಳ ನಡುವೆಯೂ ಉಳಿದ ಪ್ರಯಾಣಿಕರಿಗೆ ಹರುಷವನ್ನೂ ದಯಪಾಲಿಸಬಹುದು.

ಉಚಿತ ಎಂಬ ಕಾರಣಕ್ಕಾಗಿ ಮತ್ತೆ ಮತ್ತೆ ಪ್ರಯಾಣಕ್ಕೆ ಹೊರಟುಬಿಡುವ ಮನಸ್ಥಿತಿಗೂ ಕಡಿವಾಣ ಹಾಕಬಹುದು. ದುರ್ಬಲರ ಪರವಾದ ಕಾಳಜಿಯನ್ನು ಯೋಜನಾಬದ್ಧತೆಯ ಮೂಲಕ ನಿರೂಪಿಸಲೂಬಹುದು. ಸರಕಾರ ನಿರೀಕ್ಷಿಸಿರುವಂತೆ ಕೊಳ್ಳುವ ಸಾಮರ್ಥ್ಯದ ವಿಸ್ತಾರವೂ ಆಗಬಹುದೇನೋ.

**– ವಿರಾಟ್** ಪದ್ಮನಾಭ

## ನಾಳೆ ವಿದ್ಯುತ್ ವ್ಯತ್ಯಯ



**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರಿಸಾವೆ ಹೋಬಳಿ ಮುದಿಬೆಟ್ಟ ಕಾವಲು ಗ್ರಾಮದಲ್ಲಿ 2 12.5 ಎಮ್.ವಿ.ಎ. 66/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಗೆ ಸಂಬಂಧಿಸಿದಂತೆ 66 ಕೆ.ವಿ ವಿದ್ಯುತ್ ಮಾರ್ಗದ ಗೋಪುರ ಕಾಮಗಾರಿ ಹಾಗೂ ವಾಹಕ ಎಳೆಯುವ ಕಾಮಗಾರಿ ನಿರ್ವಹಿಸಲು ಸದರಿ 66 ಕೆ.ವಿ. ಮಟ್ಟನವಿಲೆ-ಹಿರಿಸಾವೆ-ದಿಡಗ ವಿದ್ಯುತ್ ಮಾರ್ಗದ ಲೈನ್‌ಕ್ಲಿಯರ್ ತೆಗೆದುಕೊಳ್ಳುವುದರಿಂದ 66/11 ಕೆ.ವಿ ಜುಟ್ಟನಹಳ್ಳಿ, ಹಿರಿಸಾವೆ ಮತ್ತು ದಿಡಗ ವಿದ್ಯುತ್ ವಿತರಣಾ ಕೇಂದ್ರ ದಿಂದ ವಿದ್ಯುತ್ ಸರಬರಾಜಾಗುವ 11 ಕೆ.ವಿ ಪೂರಕಗಳ ಗ್ರಾಹಕರಿಗೆ ಜು.15 ರಂದು ಬೆಳಗ್ಗೆ: 09 ರಿಂದ ಸಂಜೆ: 06 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯೋಜನೆಗಳ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಮುಸುಕಿನ ಜೋಳ ಬದಲಿಗೆ ಪರ್ಯಾಯ ಬೆಳೆ ಬೆಳೆಯಿರಿ

### ಬಿಳಿಸುಳಿ ರೋಗ ಹರಡುತ್ತಿರುವ ಹಿನ್ನೆಲೆ | ರೈತರಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕಿವಿಮಾತು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಮುಸುಕಿನ ಜೋಳದ ಬೆಳೆಗೆ ಬಿಳಿಸುಳಿ ರೋಗ ಬರುತ್ತಿರುವುದರಿಂದ ರೈತರು ಪರ್ಯಾಯ ಬೆಳೆ ಬೆಳೆಯುವುದು ಅನಿವಾರ್ಯವಾಗಿದೆ ಎಂದು ಜಿಲ್ಲಾಧಿಕಾರಿ ಲತಾಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಸುಕಿನ ಜೋಳ ಬೆಳೆಗೆ ಬಿಳಿಸುಳಿ ರೋಗ ಬಂದಿರುವುದನ್ನು ಗಂಭೀರವಾಗಿ ಪರಿಗಣಿಸಿ ಪುನಃ ಅದೇ ಬೆಳೆ ಬೆಳೆದರೆ ರೋಗ ಬರುವ ಸಂಭವನೀಯತೆ ಹೆಚ್ಚಿದೆ. ಆ ಕಾರಣಕ್ಕೆ ರೈತರು ಎಚ್ಚರ ವಹಿಸಿ ಇತರೆ ಬೆಳೆಗಳನ್ನು ಬೆಳೆಯಬೇಕು ಎಂದರು.

ಜಿಲ್ಲೆಯಲ್ಲಿ ಮುಸುಕಿನ ಜೋಳ ಬೆಳೆಗೆ ಬಿಳಿಸುಳಿ ರೋಗ ಹರಡುತ್ತಿರುವುರಿಂದ ಪ್ರತಿ ತಾಲ್ಲೂಕುಗಳಲ್ಲಿ ಬಿತ್ತನೆಗೆ ಎಷ್ಟು ಗುರಿ ಇತ್ತು, ಎಷ್ಟು ವಿಸ್ತೀರ್ಣದಲ್ಲಿ ಬಿತ್ತನೆ ಮಾಡಲಾಗಿದೆ. ಎಷ್ಟು ವಿಸ್ತೀರ್ಣದಲ್ಲಿ ಬಿಳಿಸುಳಿ ರೋಗ ಬಂದಿದೆ. ಮುಸುಕಿನ ಜೋಳ ಬೆಳೆಗೆ ಎಷ್ಟು ರೈತರು ವಿಮೆ ಮಾಡಿಸಿದ್ದಾರೆ ಎಂಬುದರ ಕುರಿತು ಶುಕ್ರವಾರದೊಳಗೆ ವರದಿ ನೀಡಿ. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಪ್ರತಿ ಶುಕ್ರವಾರ ಇರುತ್ತದೆ, ಅತೀ ತುರ್ತು ಸಂದರ್ಭದಲ್ಲಿ ಸೋಮವಾರ ಕೂಡ ಸಭೆ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.




ಜಿಲ್ಲೆಯಲ್ಲಿ ಹೈನುಗಾರಿಕೆಗೆ ಹೆಚ್ಚಿನ ಪ್ರಾಮುಖ್ಯತೆ ಇದೆ ಇದರ ರಕ್ಷಣೆಗೆ ಹೆಚ್ಚಿನ ನಿಗಾ ವಹಿಸಬೇಕಿದೆ ಬಡ ರೈತರ ಬದುಕಿಗೆ ಆಧಾರವಾಗಿರುವ ಹೈನುಗಾರಿಕೆಯನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜ ಬೇಡಿಕೆಗೆ ಅನುಗುಣವಾಗಿ ವಿತರಣೆಗೆ ಕ್ರಮಕೈಗೊಳ್ಳುವಂತೆ, ಯಾವುದೇ ದೂರುಗಳು ಬರದಂತೆ ನೋಡಿಕೊಳ್ಳಿ ಎಂದು ತಿಳಿಸಿದರಲ್ಲದೆ, ಬೆಳೆ ವಿಮೆ ಮಾಡಿಸಲು ರೈತರಿಗೆ ಪ್ರೋತ್ಸಾಹ ನೀಡಬೇಕು ಎಂದರಲ್ಲದೆ, ಬೆಳೆ ಸಮೀಕ್ಷೆ ಜುಲೈ 1 ರಿಂದ ಪ್ರಾರಂಭವಾಗಿದೆ ರ‍್ಯಾಡಂಮ್ ಆಗಿ ಚೆಕ್ ಮಾಡಲು ಒಂದು ತಂಡ ರಚಿಸಲು ಸೂಚನೆ ನೀಡಿದರು.

ಅದೇ ರೀತಿ ಭತ್ತದ ಬೆಳೆಯನ್ನು ಈ ವರ್ಷ ಬೆಳೆಯದೇ ಇರುವುದು ಸೂಕ್ತ ಎಂದು ಹವಾಮಾನ ತಜ್ಞರು ಎಚ್ಚರಿಸಿರುತ್ತಾರೆ. ನೀರನ್ನು ಹೆಚ್ಚು ಬೇಡುವ ಬೆಳೆಗಳನ್ನು ಬೆಳೆಯದೇ ಇರುವುದು ಒಳ್ಳೆಯದು ಎಂದು ಈ ಬಾರಿ ವಿಜ್ಞಾನಿಗಳು ಮತ್ತು ಹವಾಮಾನ ತಜ್ಞರು ತಿಳಿಸಿರುವುದರಿಂದ, ಈ ಬಾರಿ ಎಲ್ಲಾ ಜಲಾಶಯಗಳಲ್ಲೂ ಕೂಡ ನೀರಿನ ಶೇಖರಣೆ ಕಡಿಮೆ ಇರುವುದರಿಂದ ಭತ್ತ ಬೆಳೆಯುವಂತಹ ಪ್ರದೇಶಗಳಲ್ಲಿ ರೈತ ಬಾಂಧವರು ಹೆಚ್ಚು ಬರಸಹಿಷ್ಣುತೆ ಶಕ್ತಿಯನ್ನು ಹೊಂದಿರುವಂತಹ ರಾಗಿಯನ್ನು ಬೆಳೆಯಬಹುದಾಗಿದೆ ಎಂದರು.

ಜಿಲ್ಲೆಯ ಜಾನುವಾರುಗಳ ರಕ್ಷಣೆಗಾಗಿ ಮೇವು ಬೆಳೆಯಲು ಪಶುಪಾಲನಾ ಇಲಾಖೆಯ ಮೂಲಕ ಮೇವಿನ ಕಿರು ಪೊಟ್ಟಣಗಳನ್ನು ರೈತರಿಗೆ ವಿತರಣೆ ಆಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಎಚ್ಚೆತ್ತುಕೊಳ್ಳುವಂತೆ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಮಟ್ಟದ ಮೇವು ಕಾರ್ಯಪಡೆ ಅಡಿಯಲ್ಲಿ ಕ್ರಿಯಾ ಯೋಜನೆ ತಯಾರಿಸಲು ಗ್ರೌಂಡ್ ಲೆವೆಲ್‌ನಲ್ಲಿ ಪರಿಸ್ಥಿತಿಯನ್ನು ಪರಿಗಣಿಸಿ ತಯಾರಿಸಿ. ತೋಟಗಾರಿಕೆ ಬೆಳೆಗಳ ಮಧ್ಯೆ ಮೇವಿನ ಬೆಳೆಗಳನ್ನು ಬೆಳೆಯಲು ಕಿರು ಮೇವಿನ ಪೊಟ್ಟಣಗಳನ್ನು ವಿತರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರಲ್ಲದೆ, ಅಜೋಲಾ ಮೇವು ಬೆಳೆ ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡುವಂತೆ ನಿರ್ದೇಶನ ನೀಡಿದರು.

ಅಂತರ್ಜಲ ಮಟ್ಟವನ್ನು ಪರಿಶೀಲಿಸಲು ಅರಸೀಕೆರೆ ತಾಲ್ಲೂಕಿನ ಬಾಣಾವರವನ್ನು ಪ್ರಾಯೋಗಿಕವಾಗಿ ತೆಗೆದುಕೊಳ್ಳುವಂತೆ ತಿಳಿಸಿದರಲ್ಲದೆ, ನೀರಿನ ಮಾದರಿಗಳ ಗುಣಮಟ್ಟ ಪರೀಶಿಲನೆಗೆ ಹೆಚ್ಚಿನ ಒತ್ತು ನೀಡಬೇಕು. ಜಿಲ್ಲೆಯಲ್ಲಿ ಅನಧಿಕೃತವಾಗಿ ಕೊಳವೆ ಬಾವಿ ಕೊರೆಯುವಂತಿಲ್ಲ ಜೊತೆಗೆ ಯಾವುದೇ ಅವಘಡಗಳು ಸಂಭವಿಸದಂತೆ ವಿಫಲವಾದ ಕೊಳವೆ ಬಾವಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ಜಂಟಿ ಕೃಷಿ ನಿರ್ದೇಶಕ ರಮೇಶ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

## ಆಶ್ರಯ ಯೋಜನೆಗೆ ಮೀಸಲಿದ್ದ ಜಾಗ ಉಳಿಸಲು ರೈತರ ಆಗ್ರಹ



• ಪ್ರಜೋದಯ ವರದಿ

**ಹಾಸನ:** ಅರಕಲಗೂಡು ತಾಲ್ಲೂಕಿನ ಅಬೂರು ಮಾಚೇಗೌಡನಹಳ್ಳಿ ಗ್ರಾಮದ ಸರ್ವೆ ನಂ.94ರಲ್ಲಿ ಆಶ್ರಯ ಯೋಜನೆಗೆ ಮೀಸಲಿಟ್ಟಿರುವ ಜಾಗದಲ್ಲಿ ಅಕ್ರಮವಾಗಿ ಸರ್ಕಾರಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘಟನೆಯಿಂದ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಂಘದ ಜಿಲ್ಲಾಧ್ಯಕ್ಷ ಬಾಬು ಅವರು ಮಾತನಾಡಿ, 1991-92ನೇ ಸಾಲಿನಲ್ಲಿ ಬಡವರು ಹಾಗು ದಲಿತ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ ಹಕ್ಕುಪತ್ರ ನೀಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಫಲಾನುಭವಿಗಳು ನಿರ್ಮಿಸಿಕೊಂಡಿದ್ದ ತಾತ್ಕಾಲಿಕ ಶೆಡ್‌ಗಳನ್ನು ರಾಜಕೀಯ ಪ್ರೇರಿತವಾಗಿ ತೆರವುಗೊಳಿಸಲಾಗಿದೆ. ಬಳಿಕ ನಡೆದ ಸರ್ವೆ ಕಾರ್ಯದಲ್ಲಿಯೂ ಅನಧಿಕೃತ ಅತಿಕ್ರಮಣಗಳನ್ನು ಕಡೆಗಣಿಸಲಾಗಿದೆ ಎಂದು ದೂರಿದರು.

ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳು ಹಾಗು ಸರ್ಕಾರಿ ಭೂಮಿ ಅತಿಕ್ರಮಿಸಿರುವವರ ವಿರುದ್ಧ ಭೂಕಬಳಿಕೆ ಕಾಯ್ದೆಯಡಿ ಕಠಿಣ ಕ್ರಮ ಜರುಗಿಸಿ, ಹಕ್ಕುಪತ್ರ ಹೊಂದಿರುವ ಫಲಾನುಭವಿಗಳಿಗೆ ನ್ಯಾಯ ಒದಗಿಸಬೇಕು. ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗು ವುದು ಎಂದು ರೈತ ಸಂಘಟನೆ ಎಚ್ಚರಿಕೆ ನೀಡಿದೆ. ಜಿಲ್ಲಾ ಸಮಿತಿಯು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿದರು.

ರೈತ ಸಂಘದ ಮುಖಂಡರಾದ ರಾಮಚಂದ್ರ, ರಮೇಶ್, ಕಾಳಮ್ಮ, ಗೌರಮ್ಮ, ಜಯಲಕ್ಷ್ಮಿ, ಸಾಕಮ್ಮ, ಲಕ್ಷ್ಮೀಶ್, ಶಂಕರೇಗೌಡ, ಸೋಮಶೇಖರ್, ರಂಗಸ್ವಾಮಿ, ಅಬ್ದುಲ್ ಭಾಗವಹಿಸಿದ್ದರು.

## ಎಸ್‌ಐಆರ್ ಪ್ರಾಮುಖ್ಯತೆ; ಮಾಹಿತಿ



• ಪ್ರಜೋದಯ ವರದಿ

**ಆಲೂರು:** ಭಾರತೀಯ ಜನತಾ ಪಾರ್ಟಿ ಆಲೂರು ಮಂಡಲದ ವತಿಯಿಂದ ಮಲ್ಲಾಪುರ ಶಕ್ತಿ ಕೇಂದ್ರದಲ್ಲಿ ಎಸ್.ಐ.ಆರ್. ಕುರಿತಾಗಿ ಏರ್ಪಡಿಸಲಾಗಿದ್ದ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಸಿಮೆಂಟ್ ಮಂಜು ಅವರು ಎಸ್‌ಐಆರ್ ನ ಪ್ರಾಮುಖ್ಯತೆ ಮತ್ತು ನೀತಿ ನಿಯಮಗಳ ಕುರಿತು ಮಾಹಿತಿ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ರಾಜಕುಮಾರ್, ಮಂಡಲ ಅಧ್ಯಕ್ಷ ಉಮ ರವಿಪ್ರಕಾಶ್, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ಜಿಲ್ಲಾ ಮತ್ತು ಮಂಡಲ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ತ.ನಾಡು ಗೋಹತ್ಯೆ ನಿಷೇಧ ಆದೇಶಕ್ಕೆ ಸುಪ್ರೀಂ ತಡೆ

**ತಮಿಳುನಾಡು:** ರಾಜ್ಯದಲ್ಲಿ ಬಕ್ರೀದ್ ಹಬ್ಬ ಸೇರಿದಂತೆ ಯಾವುದೇ ದಿನಗಳಲ್ಲಿ ಗೋಹತ್ಯೆ ಮಾಡದಂತೆ ಸಂಪೂರ್ಣ ನಿಷೇಧ ಹೇರಿ ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂಕೋರ್ಟ್ ಸದ್ಯ ಮಧ್ಯಂತರ ತಡೆ ನೀಡಿದೆ.

ಮದ್ರಾಸ್ ಹೈಕೋರ್ಟ್‌ನ ಈ ಕಠಿಣ ನಿರ್ದೇಶನವನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯ ಈ ಮಹತ್ವದ ತೀರ್ಪು ಪ್ರಕಟಿಸಿದೆ. ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾದ ಜಸ್ಟಿಸ್ ವಿಕ್ರಮ್‌ನಾಥ್ ಮತ್ತು ಜಸ್ಟಿಸ್ ಸಂದೀಪ್ ಮೆಹ್ತಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು ಹೈಕೋರ್ಟ್ ಆದೇಶಕ್ಕೆ ಬ್ರೇಕ್ ಹಾಕಿದ್ದು, ರಾಜ್ಯದಲ್ಲಿದ್ದ ಹಳೆಯ ನಿಯಂತ್ರಿತ ಗೋಹತ್ಯೆ ನಿಯಮವೇ ಸದ್ಯಕ್ಕೆ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದೆ.

## ದೀರ್ಘಕಾಲದ ಕಾಯಿಲೆಗಳಿಗೆ ಹೋಮಿಯೋಪತಿಯೇ ಸಂಜೀವಿನಿ

• ಪ್ರಜೋದಯ ವರದಿ

**ಬೇಲೂರು:** ದೀರ್ಘಕಾಲದ ಕಾಯಿಲೆಗಳ ಚಿಕಿತ್ಸೆಯಲ್ಲಿ ಹೋಮಿಯೋಪತಿ ವೈದ್ಯಕೀಯ ಪದ್ಧತಿ ಪರಿಣಾಮಕಾರಿ ಪಾತ್ರ ವಹಿಸುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹಿರಿಯ ಹೋಮಿಯೋಪತಿ ವೈದ್ಯೆ ಡಾ. ಶ್ರೀಲತಾ ಹೇಳಿದರು.

ಪಟ್ಟಣದಲ್ಲಿ ಆರಂಭಗೊಂಡ ಹೋಮಿಯೋಪತಿ ಕ್ಲಿನಿಕ್‌ನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ವೃತ್ತಿಯ ಮೂಲ ಧರ್ಮವೇ ಸೇವೆಯಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ರೋಗಿಯ ಹಿತವೇ ಮೊದಲ ಆದ್ಯತೆಯಾಗಬೇಕು. ಹೋಮಿಯೋಪತಿ ಪದ್ಧತಿ ಭಾರತಕ್ಕೆ ನಂತರ ಬಂದಿದ್ದರೂ, ಇದರ ಮೂಲ ಜರ್ಮನಿಯಾಗಿದೆ. ಜರ್ಮನಿಯ ವೈದ್ಯ ಡಾ. ಸ್ಯಾಮ್ಯುಯೆಲ್ ಹ್ಯಾನೆಮನ್ ಅವರು ಅಲೋಪತಿ ವೈದ್ಯಕೀಯ ಪದ್ಧತಿಯಲ್ಲಿದ್ದ ಕೆಲವು ಮಿತಿಗಳನ್ನು ಮನಗಂಡು, ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆ ನೀಡುವ ಉದ್ದೇಶದಿಂದ ಹೋಮಿಯೋಪತಿ ಚಿಕಿತ್ಸಾ ಪದ್ಧತಿಯನ್ನು ರೂಪಿಸಿದರು ಎಂದು ವಿವರಿಸಿದರು.



ವೈದ್ಯೆ ಡಾ.ಸೌಗಂಧಿಕಾ ಅವರು ಮಾತನಾಡಿ, ಹೋಮಿಯೋಪತಿ ವೈದ್ಯಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ನನ್ನ ತಾಯಿ ಡಾ. ಶ್ರೀಲತಾ ಅವರೇ ಪ್ರಮುಖ ಪ್ರೇರಣೆ. ಇತರ ಚಿಕಿತ್ಸಾ ಪದ್ಧತಿಗಳಲ್ಲಿ ಗುಣಮುಖವಾಗದ ಅನೇಕ ಸಂಕೀರ್ಣ ಆರೋಗ್ಯ ಸಮಸ್ಯೆಗಳು ಹೋಮಿಯೋಪತಿ ಚಿಕಿತ್ಸೆಯಿಂದ ಸುಧಾರಿಸುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅದೇ ಈ ಕ್ಷೇತ್ರಕ್ಕೆ ಬರಲು ನನಗೆ ಸ್ಪೂರ್ತಿಯಾಯಿತು ಎಂದು ಹೇಳಿದರು.

ನನ್ನ ತಾಯಿ ಹೋಮಿಯೋಪತಿ ಕ್ಷೇತ್ರಕ್ಕೆ ಬರಲು ಮೂಡಿಗೆರೆಯ ಹಿರಿಯ ಹೋಮಿಯೋಪತಿ ವೈದ್ಯರಾಗಿದ್ದ ನನ್ನ ತಾತ ಡಾ. ಎ.ಎನ್. ಜಯದೇವಪ್ಪ ಅವರ ಪ್ರೇರಣೆಯೇ ಕಾರಣ. ಅವರ ಸೇವಾ ಮನೋಭಾವ ಮತ್ತು ವೈದ್ಯಕೀಯ ಪರಂಪರೆಯನ್ನು ಮುಂದುವರಿಸುವ ಅವಕಾಶ ಸಿಕ್ಕಿರುವುದು ಹೆಮ್ಮೆಯ ವಿಷಯ ಎಂದು ಅವರು ಸ್ಮರಿಸಿದರು. ಇದೇ ವೇಳೆ ತಮ್ಮನ್ನು ಪ್ರೋತ್ಸಾಹಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಪುರಸಭೆ ಸದಸ್ಯ ಜಗದೀಶ್ ಮಾತನಾಡಿ, ಇದುವರೆಗೆ ಬೇಲೂರು ತಾಲ್ಲೂಕಿನಲ್ಲಿ ಹೋಮಿಯೋಪತಿ ಕ್ಲಿನಿಕ್ ಇರಲಿಲ್ಲ. ಅಲೋಪತಿ ಚಿಕಿತ್ಸೆಗೆ ಹೆಚ್ಚಿನ ವೆಚ್ಚವಾಗುತ್ತಿರುವ ಸಂದರ್ಭದಲ್ಲಿ, ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ದೊರೆಯುವ ಹೋಮಿಯೋಪತಿ ವ್ಯವಸ್ಥೆ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ವರದಾನವಾಗಲಿದೆ ಎಂದು ಅಭಿಪ್ರಾಯಿಸಿದರು.

ಈ ಕ್ಲಿನಿಕ್ ಆರಂಭಿಸಲು ಡಾ. ಸೌಗಂಧಿಕಾ ಹಾಗೂ ಅವರ ಪತಿ ವಸಿಷ್ಠ ಸಾಕಷ್ಟು ಶ್ರಮ ವಹಿಸಿದ್ದು, ಅಗತ್ಯವಿರುವ ಎಲ್ಲ ಕಾನೂನುಬದ್ಧ ಅನುಮತಿಗಳನ್ನು ಪಡೆದು ಸಾರ್ವಜನಿಕ ಸೇವೆಗೆ ಸಮರ್ಪಿಸಿದ್ದಾರೆ. ಈ ಕಾರ್ಯಕ್ಕೆ ದೇವರಾಜ್ ಸೇರಿದಂತೆ ಅನೇಕರು ಸಹಕಾರ ನೀಡಿರುವುದು ಶ್ಲಾಘನೀಯ ಎಂದರಲ್ಲದೆ, ತಾಲ್ಲೂಕಿನ ಸಾರ್ವಜನಿಕರು ಈ ಕ್ಲಿನಿಕ್‌ನ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟಕ್ಕೂ ಹೋಮಿಯೋಪತಿ ಚಿಕಿತ್ಸಾ ಸೇವೆ ವಿಸ್ತರಿಸಲಿ ಎಂದು ಅವರು ಆಶಿಸಿದರು.

ಕಾರ್ಯಕ್ರಮದಲ್ಲಿ ದೇವರಾಜ್, ಅನುಪಮ, ಸಚ್ಚಿದಾನಂದ, ವಸಿಷ್ಠ, ಪದ್ಮೇಗೌಡ, ನಾಗೇಂದ್ರ, ಚಂದು ಇನ್ನಿತರರು ಉಪಸ್ಥಿತರಿದ್ದರು.

## 5 ದಿನ ಮಳೆ ಮುನ್ಸೂಚನೆ

**ಬೆಂಗಳೂರು:** ರಾಜ್ಯದಲ್ಲಿ ಮುಂಗಾರು ತುಸು ದುರ್ಬಲವಾಗಿದ್ದರೂ, ಹಲವು ಜಿಲ್ಲೆಗಳಲ್ಲಿ ಮಳೆಯ ವಾತಾವರಣ ಮುಂದುವರಿಯಲಿದೆ. ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿರುವ ಮುನ್ಸೂಚನೆ ಪ್ರಕಾರ, ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಮುಂದಿನ ಐದು ದಿನಗಳ ಕಾಲ ಸಾಧಾರಣ ಮಳೆಯಾಗುವ ಸಾಧ್ಯತೆ ಇದ್ದು, ಕೆಲವು ಜಿಲ್ಲೆಗಳಲ್ಲಿ ಬಿರುಗಾಳಿಯೂ ಬೀಸಲಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಮೊದಲ ದಿನ ಈ ಭಾಗಗಳಲ್ಲಿಯೂ 30-40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಮುನ್ಸೂಚನೆ ನೀಡಲಾಗಿದೆ. ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಮಳೆಯಾಗಲಿದೆ.

# ಮಹಿಳಾ ಟೆಸ್ಟ್ ಕ್ರಿಕೆಟ್: ಭಾರತಕ್ಕೆ ಐತಿಹಾಸಿಕ ಜಯ

### 212 ವರ್ಷಗಳ ಇತಿಹಾಸದಲ್ಲಿಯೇ 270 ರನ್‌ಗಳ ಭರ್ಜರಿ ಗೆಲುವು

• ಪ್ರಜೋದಯ ವರದಿ

**ಲಂಡನ್:** ಲಾರ್ಡ್ಸ್‌ನ ಕ್ರಿಕೆಟ್ ಮೈದಾನದ 212 ವರ್ಷಗಳ ಇತಿಹಾಸದಲ್ಲಿ ಭಾರತದ ಮಹಿಳಾ ಕ್ರಿಕೆಟ್ ತಂಡವು ಸುವರ್ಣಾಕ್ಷರಗಳಲ್ಲಿ ಬರೆಯುವಂತಹ ಅಭೂತಪೂರ್ವ ಸಾಧನೆ ಮಾಡಿದೆ.

ಸೋಮವಾರ ನಡೆದ ಏಕೈಕ ಐತಿಹಾಸಿಕ ಟೆಸ್ಟ್ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ತಂಡವು ಆತಿಥೇಯ ಇಂಗ್ಲೆಂಡ್ ವಿರುದ್ಧ 270 ರನ್‌ಗಳ ಭರ್ಜರಿ ಜಯ ದಾಖಲಿಸಿದೆ. ಈ ಮೂಲಕ ಕ್ರಿಕೆಟ್‌ನ ಕಾಶಿ ಎಂದೇ ಪ್ರಖ್ಯಾತಿ ಪಡೆದಿರುವ ಲಾರ್ಡ್ಸ್ ಮೈದಾನದಲ್ಲಿ ಟೆಸ್ಟ್ ಪಂದ್ಯ ಗೆದ್ದ ವಿಶ್ವದ ಮೊದಲ ಮಹಿಳಾ ತಂಡ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಹೀಗಾಗಿ ಯುಕೆ ಪ್ರವಾಸದಲ್ಲಿ ಭಾರತ ಪುರುಷರ ತಂಡದ ನೀಡಿದ ಕಳಪೆ ಪ್ರದರ್ಶನದಿಂದಾಗಿ ತೀವ್ರ ನಿರಾಸೆಗೊಳಗಾಗಿದ್ದ ಭಾರತದ ಕ್ರಿಕೆಟ್ ಪ್ರೇಮಿಗಳು ಇದೀಗ ಮಹಿಳಾ ತಂಡದ ಅಭೂತಪೂರ್ವ ಸಾಧನೆಯಿಂದಾಗಿ ಖುಷಿಗೊಂಡಿದ್ದಾರೆ.




ಇತ್ತೀಚೆಗಷ್ಟೇ ಇಂಗ್ಲೆಂಡ್‌ನಲ್ಲಿ ಮುಕ್ತಾಯಗೊಂಡ ಐಸಿಸಿ ಮಹಿಳಾ ಟಿ20 ವಿಶ್ವಕಪ್ 2026ರ ಸೆಮಿಫೈನಲ್ ತಲುಪಲು ವಿಫಲವಾಗಿದ್ದ ಭಾರತ ತಂಡ, ಸುದೀರ್ಘ ಮಾದರಿಯ ಕ್ರಿಕೆಟ್‌ನಲ್ಲಿ ತನ್ನ ದೈತ್ಯ ಪ್ರದರ್ಶನದ ಮೂಲಕ ಭರ್ಜರಿಯಾಗಿ ಪುಟಿದೆದ್ದಿದೆ. ಪ್ರಥಮ ಇನ್ನಿಂಗ್ಸ್ ನಲ್ಲಿ 5 ವಿಕೆಟ್ ಗಳಿಸಿದ ಮಧ್ಯಮ ವೇಗದ ಬೌಲರ್ ಕ್ರಾಂತಿ ಗೌಡ್ ಮತ್ತು ದ್ವಿತೀಯ ಇನ್ನಿಂಗ್ಸ್‌ನಲ್ಲಿ ಶತಕ ಗಳಿಸಿದ ಯಾಸ್ತಿಕಾ ಭಾಟಿಯಾ ಲಾರ್ಡ್ಸ್‌ನ ಹಾನರ್ಸ್ ಬೋರ್ಡ್ ನಲ್ಲಿ ಸ್ಥಾನ ಗಳಿಸುವ ಮೂಲಕ ಈ ಗೆಲುವನ್ನು ಮತ್ತಷ್ಟು ಸ್ಮರಣೀಯವಾಗಿಸಿದ್ದು ಪಂದ್ಯದ ವಿಶೇಷವಾಗಿದೆ. ಪಂದ್ಯದಲ್ಲಿ ಒಟ್ಟಾರೆ 7 ವಿಕೆಟ್ ಪಡೆದು ಮಿಂಚಿದ ಕ್ರಾಂತಿ ಗೌಡ್ ಅವರು ಪಂದ್ಯಶ್ರೇಷ್ಠ ಪ್ರಶಸ್ತಿಗೆ ಪಾತ್ರರಾದರು.

**ಭಾರತದ ದೈತ್ಯ ಬ್ಯಾಟಿಂಗ್ ಮತ್ತು ಯಾಸ್ತಿಕಾ ದಾಖಲೆ**

ಟಾಸ್ ಗೆದ್ದು ಮೊದಲು ಬೌಲಿಂಗ್ ಆಯ್ದುಕೊಂಡ ಇಂಗ್ಲೆಂಡ್ ನಿರ್ಧಾರವನ್ನು ಸುಳ್ಳಾಗಿಸಿದ ಭಾರತ, ಮೊದಲ ಇನಿಂಗ್ಸ್‌ನಲ್ಲಿ 285 ರನ್ ಗಳಿಸಿತು. ಉಪನಾಯಕಿ ಸ್ಮೃತಿ ಮಂಧಾನ (83), ನಾಯಕಿ ಹರ್ಮನ್‌ಪ್ರೀತ್ ಕೌರ್ (58) ಮತ್ತು ರಿಚಾ ಘೋಷ್ (57) ಅರ್ಧಶತಕಗಳ ಕೊಡುಗೆ ನೀಡಿದರು. ಇಂಗ್ಲೆಂಡ್ ತಂಡವನ್ನು ಕೇವಲ 170 ರನ್‌ಗಳಿಗೆ ಆಲೌಟ್ ಮಾಡಿದ ಭಾರತ, 115 ರನ್‌ಗಳ ಮುನ್ನಡೆ ಪಡೆಯಿತು.

ಎರಡನೇ ಇನಿಂಗ್ಸ್ ನಲ್ಲಿ ಭಾರತಕ್ಕೆ ಎಡಗೈ ಬ್ಯಾಟರ್ ಯಾಸ್ತಿಕಾ ಭಾಟಿಯಾ ಆಸರೆಯಾದರು. ಜವಾಬ್ದಾರಿಯುತ ಆಟ ಪ್ರದರ್ಶಿಸಿದ ಅವರು 158 ಎಸೆತಗಳಲ್ಲಿ 113 ರನ್ ಗಳಿಸುವ ಮೂಲಕ ಚೊಚ್ಚಲ ಟೆಸ್ಟ್ ಶತಕ ಪೂರೈಸಿದರು. ಈ ಮೂಲಕ ಲಾರ್ಡ್ಸ್ ಮೈದಾನದಲ್ಲಿ ಶತಕ ಸಿಡಿಸಿ, ಗೌರವ ಫಲಕದಲ್ಲಿ ಸ್ಥಾನ ಪಡೆದ ಮೊದಲ ಮಹಿಳಾ ಬ್ಯಾಟರ್ ಎಂಬ ಇತಿಹಾಸ ನಿರ್ಮಿಸಿದರು. ಅವರಿಗೆ ಸಾಥ್ ನೀಡಿದ ಸ್ಮೃತಿ ಮಂಧಾನ 70 ರನ್ ಗಳಿಸಿದರೆ, ರಿಚಾ ಘೋಷ್ ಅಜೇಯ 50 ರನ್ ಸಿಡಿಸಿದರು. ಇಂಗ್ಲೆಂಡ್ ಪರ ಸೋಫಿ ಎಕ್ಲೆಸ್ಟನ್ 5 ವಿಕೆಟ್ ಪಡೆದರು. ಭಾರತವು ತನ್ನ ಎರಡನೇ ಇನಿಂಗ್ಸ್ ಅನ್ನು 7 ವಿಕೆಟ್‌ಗೆ 341 ರನ್ ಗಳಿಸಿದ್ದಾಗ ಡಿಕ್ಲೇರ್ ಮಾಡಿಕೊಂಡು, ಆತಿಥೇಯರಿಗೆ 457 ರನ್‌ಗಳ ಬೃಹತ್ ಗುರಿ ನೀಡಿತು.

**ಭಾರತದ ಅಪ್ರತಿಮ ಟೆಸ್ಟ್ ದಾಖಲೆ**

ಕಳೆದ ಮಾರ್ಚ್‌ನಲ್ಲಿ ಪರ್ತ್‌ನ ವಾಕಾ ಮೈದಾನದಲ್ಲಿ ಆಸ್ಟ್ರೇಲಿಯಾ ವಿರುದ್ಧ ಎದುರಿಸಿದ್ದ 10 ವಿಕೆಟ್‌ಗಳ ಸೋಲಿನ ಆಘಾತದಿಂದ ಭಾರತ ಈ ಗೆಲುವಿನ ಮೂಲಕ ಹೊರಬಂದಿದೆ. ಕಳೆದ ಎರಡು ದಶಕಗಳಲ್ಲಿ ಭಾರತಕ್ಕೆ ಎದುರಾದ ಏಕೈಕ ಸೋಲು ಇದಾಗಿದೆ. 2021ರಿಂದ ಇದುವರೆಗೆ ಆಡಿದ 7 ಪಂದ್ಯಗಳ ಪೈಕಿ ಭಾರತ 4 ರಲ್ಲಿ ಜಯಗಳಿಸಿದ್ದು, 2 ಡ್ರಾ ಹಾಗೂ 1 ರಲ್ಲಿ ಮಾತ್ರ ಸೋತಿದೆ. 1995ರ ನಂತರ ಭಾರತ ತಂಡ ಇಂಗ್ಲೆಂಡ್ ವಿರುದ್ಧ ಒಂದೂ ಟೆಸ್ಟ್ ಪಂದ್ಯವನ್ನು ಸೋತಿಲ್ಲ. ಒಟ್ಟಾರೆ ಮುಖಾಮುಖಿಯಾದ 16 ಟೆಸ್ಟ್ ಪಂದ್ಯಗಳಲ್ಲಿ ಭಾರತ 4 ರಲ್ಲಿ ಗೆದ್ದರೆ, ಇಂಗ್ಲೆಂಡ್ ಕೇವಲ 1 ಪಂದ್ಯದಲ್ಲಿ ಗೆದ್ದಿದೆ, 11 ಪಂದ್ಯಗಳು ಡ್ರಾವಾಗಿವೆ. ಇದು ಮಹಿಳಾ ಟೆಸ್ಟ್ ಇತಿಹಾಸದಲ್ಲೇ ಜಂಟಿ ನಾಲ್ಕನೇ ಅತಿ ದೊಡ್ಡ ಗೆಲುವಾಗಿದೆ.

## ತಪ್ಪಾದ ಕೃಷಿ ಔಷಧಿ ವಿತರಣೆ: ಬೆಳೆ ನಾಶ ಆರೋಪ

• ಪ್ರಜೋದಯ ವರದಿ

**ಹಾಸನ:** ತಪ್ಪಾದ ಕೃಷಿ ಔಷಧಿ ನೀಡಿದ ಪರಿಣಾಮ ಶುಂಠಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಎಂದು ಆರೋಪಿಸಿ ಬೇಲೂರು ತಾಲ್ಲೂಕಿನ ಕಬ್ಬಿನಮನೆ ಗ್ರಾಮದ ರೈತ ಮಹೇಶ್ ಮತ್ತು ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿ ನ್ಯಾಯ ಒದಗಿಸುವಂತೆ ಮನವಿ ಮಾಡಿದರು.



ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿ ನಂತರ ಮಾತನಾಡಿದ ಶಿವಮ್ಮ, ಎಸ್. ಬೊಮ್ಮಡಿಹಳ್ಳಿ ಗ್ರಾಮದ ಸರ್ವೆ ನಂ.189ರ 1.20 ಎಕರೆ ಜಮೀನಿನಲ್ಲಿ ಮಹೇಶ್ ಸುಮಾರು 30 ಚೀಲ ಶುಂಠಿ ಬಿತ್ತನೆ ಮಾಡಿದ್ದರು. ಕಳೆನಿಯಂತ್ರಣಕ್ಕಾಗಿ ದಾಸೇಗೌಡ ಪ್ಲಾಂಟೇಶನ್ ಸರ್ವೀಸಸ್ ಅಂಗಡಿಯಿಂದ ಖರೀದಿಸಿದ ಔಷಧಿಯನ್ನು ಅಂಗಡಿ ಮಾಲೀಕರ ಸಲಹೆಯಂತೆ ಸಿಂಪಡಿಸಿದ ಬಳಿಕ ಬೆಳೆ ಮೊಳಕೆಯೊಡೆಯದೆ ಸಂಪೂರ್ಣ ಹಾನಿಗೊಳಗಾಗಿದೆ ಎಂದು ಅವರು ಆರೋಪಿಸಿದರು.

ಬೆಳೆ ಬೆಳವಣಿಗೆ ಕಾಣಿಸದ ಹಿನ್ನಲೆ ಮತ್ತಷ್ಟು ಔಷಧಿಗಳನ್ನು ಖರೀದಿಸಿ ಸಿಂಪಡಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಬಳಿಕ ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಆರಂಭಿಕ ಹಂತದ ಶುಂಠಿ ಬೆಳೆಗೆ ಆ ಔಷಧಿಗಳು ಸೂಕ್ತವಲ್ಲ ಎಂಬ ಮಾಹಿತಿ ದೊರೆತಿದೆ. ಈ ಘಟನೆಯಿಂದ ಸುಮಾರು 14 ಲಕ್ಷ ಬೆಳೆ ನಷ್ಟವಾಗಿದ್ದು, ಕೃಷಿಗಾಗಿ ಪಡೆದಿರುವ 8 ಲಕ್ಷ ಸಾಲವನ್ನು ತೀರಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರೈತ ಮಹೇಶ್ ಅಳಲು ತೋಡಿಕೊಂಡಿದ್ದಾರೆ.

**ಅರಕಲಗೂಡು ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ**
**ಸಿ.ಆರ್.ಮಿಸ್ ಸಂಖ್ಯೆ 540/2026**

ಅರ್ಜಿದಾರರು 1. ದೇವರಾಜು ಸಿ. ಬಿನ್ ಚನ್ನಿಗರಾಯಶೆಟ್ಟಿ ಸುಮಾರು 52 ವರ್ಷ, ಹೆಗ್ಗತ್ತೂರು ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2. ಪ್ರೇಮ ಕೋಂ ಲೇಟ್ ಪರಮೇಶ ಸುಮಾರು 64 ವರ್ಷ, 5ನೇ ಕ್ರಾಸ್, ಅಣ್ಣಮ್ಮ ಸರ್ಕಲ್ ಹತ್ತಿರ, ಲಕ್ಷ್ಮಿದೇವಿ ನಗರ, ಬೆಂಗಳೂರು ಉತ್ತರ
3. ಶೋಭ ಕೋಂ ಜಿ.ರಮೇಶ್ ಸುಮಾರು 50 ವರ್ಷ ಹೊರೊ ಕೇತನಹಳ್ಳಿ ರಸ್ತೆ, ಶಿವಜ್ಯೋತಿ ನಗರ, ಮಾಕಳಿ,ಬೆಂಗಳೂರು

ವಿರುದ್ಧ

ರೆಸ್ಪಾಂಡೆಂಟರು ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು, ಅರಕಲಗೂಡು ತಾಲ್ಲೂಕು.

= ಪತ್ರಿಕಾ ಪ್ರಕಟಣೆ –

ಮೇಲ್ಕಂಡ ಅರ್ಜಿಯ ಅರ್ಜಿದಾರರುಗಳ ತಂದೆಯಾದ ಚೆನ್ನಿಗರಾಯಶೆಟ್ಟಿ ಬಿನ್ ಸಣ್ಣಪ್ಪಶೆಟ್ಟಿ ರವರು ದಿನಾಂಕ:25-03-2025 ರಂದು ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಹೆಗ್ಗತ್ತೂರು ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 14/08/2026 ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಜುಲೈ ತಿಂಗಳಿನ 2 ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಅರಕಲಗೂಡು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು.

ಅರ್ಜಿದಾರರ ಪರ ವಕೀಲರು
(ನಾಗರಾಜ ಎಂ.ಎಸ್.)
ದಿ:02-07-2026

## ಜು.20 ರಂದು ನೇರ ಸಂದರ್ಶನ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿ ಪ್ರಸ್ತುತ ಖಾಲಿ ಇರುವ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹುದ್ದೆ ಸಂಖ್ಯೆ-07 ಹಾಗೂ ಫಾರ್ಮಾಸಿ ಅಧಿಕಾರಿಗಳ ಹುದ್ದೆ ಸಂಖ್ಯೆ 51 ನ್ನು ನೇರ ಗುತ್ತಿಗೆ ಆಧಾರದ ಮೇಲೆ ಜು.20 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ನೇರ ಸಂದರ್ಶನ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

## ಜು.16 ರಂದು ದಿಶಾ ಸಭೆ

ಹಾಸನ: ಸಂಸದ ಶ್ರೇಯಸ್ ಎಂ. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಜು.16 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ (DISHA) ಸಭೆಯನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 517 ನೇ ನಾಢಪ್ರಭು ಶ್ರೀ ಕೆಂಪೇಗೌಡರ ಜಯಂತೋತ್ಸವದಲ್ಲಿ ಶ್ರೀ ನಿಶ್ಚಲಾನಂದನಾಥಸ್ವಾಮಿ

# ಕೆಂಪೇಗೌಡರನ್ನು ಅನುಕರಿಸಿದರೆ ಚಿರಸ್ಥಾಯಿಯಾಗಬಹುದು

• ಪ್ರಜೋದಯ ವರದಿ

**ಹೊಳೆನರಸೀಪುರ:** ಇಂದಿನ ರಾಜಕಾರಣಿಗಳು ನಾಢಪ್ರಭು ಕೆಂಪೇಗೌಡರ ಜನಪ್ರಯೋಜನಕಾರಿ ಕೆಲಸಗಳನ್ನು ಕಿಂಚಿತ್ ಅನುಸರಿಸುವ ಮೂಲಕ ಚಿರಸ್ಥಾಯಿಯಾಗಬಹುದು ಎಂದು ಬೆಂಗಳೂರಿನ ಕೆಂಗೇರಿಯ ವಿಶ್ವ ವಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದ ನಾಥಸ್ವಾಮಿ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ವಕ್ಕಲಿಗ ನಾನಾ ಸಂಘಟಕರು ಆಯೋಜಿಸಿದ್ದ 517 ನೇ ನಾಢಪ್ರಭು ಶ್ರೀ ಕೆಂಪೇಗೌಡರ ಜಯಂತೋತ್ಸವ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡಿದ ಅವರು, ಕೆಂಪೇಗೌಡ ಅವರನ್ನು ಜೀವನ ಚರಿತ್ರೆಯಿಂದಲೇ ಪುಳಕಿತರಾಗಿದ್ದ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬೆಂಗಳೂರನ್ನು ಸಾಕಷ್ಟು ಅಭಿವೃದ್ಧಿಪಡಿಸಿದ್ದರು. ಇಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಅದೇ ಮಾರ್ಗದಲ್ಲಿ ನಡೆಯಲಿ ಎಂಬ ಆಶಯ ನಮಗೆ ಇದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ದೇಶಕ್ಕೆ ನೀಡಿದ ಕೊಡುಗೆ ಅಪಾರ. ಕವಿಗಳು, ವಿಧಾನ, ವಿಕಾಸಸೌಧಗಳನ್ನು ನಿರ್ಮಿಸಿದ್ದರ ಹಿನ್ನಲೆ ವಕ್ಕಲಿಗ ಸಮುದಾಯದ ಕೊಡುಗೆ ಇದೆ ಎಂದರು.



ಹಾಸನ ಜಿಲ್ಲೆಯ ಹೆಮ್ಮೆಯ ಸಂಸದ ಎಂದು ಶ್ರೇಯಸ್ ಎಂ. ಪಟೇಲ್‌ರನ್ನು ಬಣ್ಣಿಸಿದ ಸ್ವಾಮಿಜಿ, ಚಿಕ್ಕ ವಯಸ್ಸಿನಲ್ಲೇ ಲೋಕಸಭಾ ಸದಸ್ಯನ ಸ್ಥಾನ ಅಲಂಕರಿಸಿದ್ದಾರೆ. ಅವರ ಭಾಷಣದಲ್ಲಿ ಪಕ್ಷಾತೀತವಾಗಿ, ಜ್ಯಾತ್ಯಾತೀತವಾಗಿ ಮತ್ತು ಧರ್ಮಾತೀತವಾಗಿ ಇರುವ ಲಕ್ಷಣಗಳು ಕಾಣಬಹುದು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಸ್ಮರಿಸಿದರು. ಪಕ್ಷ ಬೇರೆ ಎಂದೆಣಿಸದೇ ಅರಕಲಗೂಡು ಕ್ಷೇತ್ರದ ಶಾಸಕ ಎ.ಮಂಜು ಅವರನ್ನು ಸಾಹೇಬರು ಎಂದು ಗೌರವಿಸಿ ಮಾತನಾಡಿದರು ಎಂದು ಅವರು ಬಿಂಬಿಸಿದರು.

ಹಾಸನ ಆದಿಚಂಚುನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮಿಜಿ ಆಶೀರ್ವಚನ ನೀಡಿ, ಎಲ್ಲ ಸಮುದಾಯದವರನ್ನು ಬಹಳ ಪ್ರೀತಿಯಿಂದ ಕಾಣುವ ಮೂಲಕ ಸಮಾಜದ ಒಳಿತನ್ನು ಕಾಣಬೇಕೆಂಬ ಹೆಗ್ಗಳಿಕೆ ವಕ್ಕಲಿಗ ಸಮುದಾಯದ್ದಾಗಿದೆ. ನಾಡಿನ ಹಿರಿಮೆಯನ್ನು ಹೆಚ್ಚಿಸಿರುವ ಬೆಂಗಳೂರಿನ ಇಂದಿನ ಅಭಿವೃದ್ದಿಗೆ ಅಂದು ನಾಢಪ್ರಭು ಕೆಂಪೇಗೌಡರ ಭದ್ರ ಬುನಾದಿ ಕಾರಣ. ಅವರನ್ನು ಸ್ಮರಿಸುವಲ್ಲಿ ಯಾವುದೇ ಬಿನ್ನಾಭಿಪ್ರಾಯ ಇರಬಾರದು. ಬಸವ ಮೆಟ್ಟಿದ ನಾಡಿನಲ್ಲಿ ಬದುಕಿರುವ ನಾವುಗಳು ಎಲ್ಲರನ್ನು ನಮ್ಮವರಂತೆಯೇ ಕಾಣಬೇಕೆಂದು ತಿಳಿಸಿದರು.

ಸಂಸದ ಶ್ರೇಯಸ್ ಎಂ.ಪಟೇಲ್ ಮಾತನಾಡಿ, ವಿವಿಧತೆಯಲ್ಲಿ ಏಕತೆ ಎಂಬುದಕ್ಕೆ ಹೊಳೆನರಸೀಪುರ ಕ್ಷೇತ್ರದ ಜನತೆ ಸಾಕ್ಷಿಯಾಗಿದ್ದಾರೆ. ಇಂದು ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಎಲ್ಲ ಬೇದ ಮರೆತು ಮಹನೀಯರನ್ನು ಆಚರಿಸುವ ಕಾರ್ಯ ಇದಕ್ಕೆ ಸಾಕ್ಷಿಯಾಗಿದೆ ಎಂದು ನುಡಿದರು.

ಶಾಸಕ ಎ.ಮಂಜು ಮಾತನಾಡಿ, ಸರ್ಕಾರ ನಿಗಧಿಪಡಿಸಿರುವ ದಿನದಲ್ಲೇ ಮುಂದಿನ ದಿನಗಳಲ್ಲಿ ಜಯಂತಿ ಆಚರಣೆ ಮಾಡಿ, ಆಗ ಮಾತ್ರ ಎಲ್ಲರೂ ಒಗ್ಗಟ್ಟಾಗಿ ಆಚರಿಸಲು ಅನುವು ಆಗುತ್ತದೆ ಎಂದರು.

ಕೃಷಿಯಲ್ಲಿ ಸಾಧನೆ ಮಾಡಿದ ಪ್ರಗತಿಪರ ತಾಲೂಕಿನ 50 ರೈತರಿಗೆ ಸನ್ಮಾನಿಸಲಾಯಿತು. ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.95 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿದರು.

ಪಟ್ಟಣದಾದ್ಯಂತ ನಾಡಪ್ರಭು ಕೆಂಪೇಗೌಡರ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ಮೆರವಣಿಗೆ ಅದ್ದೂರಿಯಾಗಿ ನಡೆಸಲಾಯಿತು. 10 ಕಲಾತಂಡಗಳು ನಡೆಸಿದ ಡೊಳ್ಳು ಕುಣಿತ, ಚಂಡೆಮದ್ದಳೆ, ವೀರಗಾಸೆ, ಹುಲಿಯಾಟ ಜನಮನ ಸೆಳೆದವು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಲ್ಲೇಶ್‌ಗೌಡ, ನೌಕರರ ಸಂಘದ ಮಾಜಿ ರಾಜ್ಯಾಧ್ಯಕ್ಷ ಬಾಗೂರು ಮಂಜೇಗೌಡ, ಕಾಂಗ್ರೆಸ್ ಮುಖಂಡ ಕೃಷ್ಣೇಗೌಡ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪೃಥ್ವಿರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ವೃತ್ತಿ ಧರ್ಮ ಮರೆತರೆ ರಾಜಧರ್ಮ ಪ್ರಶ್ನಿಸುವ ನೈತಿಕತೆ ಇರಲ್ಲ

## ಪತ್ರಕರ್ತರಿಗೆ ಕೆ.ವಿ.ಪ್ರಭಾಕರ್ ಎಚ್ಚರಿಕೆ | ಪತ್ರಿಕಾ ದಿನಾಚರಣೆ ಸಮಾರೋಪ

• ಪ್ರಜೋದಯ ವರದಿ

**ಅರಸೀಕೆರೆ:** ವೃತ್ತಿ ಧರ್ಮ ಕಾಪಾಡದಿದ್ದರೆ ರಾಜಧರ್ಮವನ್ನು ಪ್ರಶ್ನಿಸುವ ನೈತಿಕತೆ ಇರುವುದಿಲ್ಲವೆಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಎಚ್ಚರಿಕೆ ನೀಡಿದರು.

ನಗರದ ಕಸ್ತೂರಬಾ ಗಾಂಧಿ ಸ್ಮಾರಕ ಸಭಾಂಗಣದಲ್ಲಿ ಭಾನುವಾರ ನಡೆದ ಜಿಲ್ಲಾ ಸಮ್ಮೇಳನ ಹಾಗು ಪತ್ರಿಕಾ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವೃತ್ತಿ ಧರ್ಮ ಕಾಪಾಡುವ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಬೇಕು. ಪ್ರಸ್ತುತ ಪತ್ರಿಕೋದ್ಯಮ ಸಾಕಷ್ಟು ಬದಲಾವಣೆ ಕಂಡಿದೆ. ಕೃತಕ ಬುದ್ಧಿಮತ್ತೆ (ಎಐ) ಮನುಷ್ಯನನ್ನೇ ಮೀರಿಸುವಷ್ಟು ಬೆಳೆದಿರುವುದರಿಂದ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಿದೆ. ಊಹಾ ಪತ್ರಿಕೋದ್ಯಮವೂ ಹೆಚ್ಚುತ್ತಿದ್ದು ಅಪಾಯಕಾರಿ ಬೆಳವಣಿಗೆ ಎಂದರು.

ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಕರೆಯಲ್ಪಡುವ ಮಾಧ್ಯಮ ರಂಗ ವೃತ್ತಿನಿಷ್ಠೆ ಮರೆಯಬಾರದು. ಪತ್ರಕರ್ತರು ಸಮಾಜದ ಪಾವಿತ್ರ್ಯತೆಯನ್ನು ಕಾಪಾಡುವಲ್ಲಿ ಮತ್ತು ಜನಸಾಮಾನ್ಯರಿಗೆ ನಿಖರ ಮಾಹಿತಿ ತಲುಪಿಸುವಲ್ಲಿ ಹಗಲಿರುಳು ಶ್ರಮಿಸುತ್ತಾರೆ. ಅವರ ಈ ಶ್ರಮ ಅತ್ಯಮೂಲ್ಯವಾದದ್ದು ಎಂದರು.

**ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ಸಿಗಲಿ**

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ತಾಲ್ಲೂಕಿನ ಕೆರೆ ಕಟ್ಟೆಗಳನ್ನು ತುಂಬಿಸಲು ಅವಿರತ ಶ್ರಮಪಡುತ್ತಾರೆ. ಕ್ಷೇತ್ರದ ಜನರ ಒಳಿತಿಗಾಗಿ ಕಣ್ಣೀರು ಸುರಿಸಿದ್ದನ್ನು ನೋಡಿದ್ದೇವೆ. ಇಂತಹ ಜನಪ್ರತಿನಿಧಿಯನ್ನು ಪಡೆದಿರುವ ತಾಲ್ಲೂಕಿನ ಜನರು ಭಾಗ್ಯಶಾಲಿಗಳು. ನಿತ್ಯ ವಿಧಾನಸಭೆಯಲ್ಲಿ ಕಡತಗಳೊಂದಿಗೆ ಓಡಾಡುವ ಅವರು ಕ್ಷೇತ್ರದ ಅಭಿವೃದ್ಧಿಗಾಗಿ ಓಡಾಡುತ್ತಾರೆ. ಇಂತಹ ಜನಪರ ಕಾಳಜಿ ಇರುವವರಿಗೆ ಸಚಿವ ಸ್ಥಾನ ಸಿಕ್ಕರೆ ಜಿಲ್ಲೆಗೆ ಭಾರೀ ಅನುಕೂಲವಾಗುತ್ತದೆಂದರು.

ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಮಾತನಾಡಿ, ಅರಸೀಕೆರೆ ತಾಲ್ಲೂಕಿಗೆ ಅಗತ್ಯವಿದ್ದ ಪತ್ರಕರ್ತರ ಭವನವನ್ನು ಶಾಸಕ ಶಿವಲಿಂಗೇಗೌಡರು ಸರ್ಕಾರದ ನೆರವು ಮತ್ತು ವೈಯಕ್ತಿಕವಾಗಿ ನಿರ್ಮಿಸಿಕೊಡುವ ಜವಾಬ್ದಾರಿ ಹೊತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

ವಕೀಲ ಬಿ.ಕೆ.ವಿವೇಕ್ ಅವರು ಮಾತನಾಡಿ, ಪತ್ರಕರ್ತರು ನೈಜ ಸುದ್ದಿಗಳನ್ನು ಪ್ರಸಾರ ಮಾಡುವ ಮೂಲಕ ಸತ್ಯ ಬಿತ್ತರಿಸಬೇಕು. ಯಾರದೋ ಮುಲಾಜಿಗೆ ಒಳಗಾಗದೆ ಸತ್ಯದ ಪರವಾಗಿರಬೇಕೆಂದರು. ಸಮಾಜಕ್ಕಾಗಿ ನಿತ್ಯ ಕೆಲಸ ಮಾಡುವ ಮಾಧ್ಯಮ ಮಿತ್ರರಿಗೆ ರಕ್ಷಣೆ ಇಲ್ಲವಾಗಿದೆ. ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪತ್ರಕರ್ತರಿಗೆ ಪಿಂಚಣಿ, ಆರೋಗ್ಯ ಸೌಲಭ್ಯ ಕಲ್ಪಿಸಬೇಕು. ರಾಜ್ಯ ಹಾಗು ಜಿಲ್ಲಾ ಸಂಘದ ಪದಾಧಿಕಾರಿಗಳು ಈ ನಿಟ್ಟಿನಲ್ಲಿ ಒತ್ತಡ ಹೇರಬೇಕೆಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ರಾಂಪುರ ಶೇಖರ್ ಅವರು ಮಾತನಾಡಿ, ಸ್ಪರ್ಧಾತ್ಮಕ ದಿನಗಳಲ್ಲಿ ಇತರರಿಗಿಂತ ಭಿನ್ನವಾಗಿ ವರದಿ ಮಾಡುವುದು ಸವಾಲಿನ ಕೆಲಸ. ಗಾಳಿ, ಮಳೆ, ಚಳಿ ಎನ್ನದೆ ವರದಿಗಾರರು ಸುತ್ತಾಡಿ ಸುದ್ದಿ ಸಂಗ್ರಹಿಸುತ್ತಾರೆ. ಸ್ವಾತಂತ್ರ್ಯ ಪೂರ್ವದಿಂದಲೂ ನಮ್ಮ ದೇಶದಲ್ಲಿ ಪತ್ರಿಕಾ ರಂಗಕ್ಕೆ ವಿಶೇಷ ಗೌರವ ನೀಡಲಾಗಿದೆ. ಪ್ರಸ್ತುತ ದಿನಗಳಲ್ಲಿ ಪತ್ರಿಕಾ ರಂಗ ಸಾಕಷ್ಟು ಸವಾಲುಗಳ ಮಧ್ಯೆಯೂ ತನ್ನ ಅಸ್ತಿತ್ವವನ್ನು ಗಟ್ಟಿಯಾಗಿಸಿಕೊಂಡಿದೆ ಎಂದರು.

ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಮಾಜಿ ಮಾಧ್ಯಮ ಸಲಹೆಗಾರ ಲಕ್ಷ್ಮಿನಾರಾಯಣ, ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಮಾತನಾಡಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ,ಪತ್ರಕರ್ತ ಚಿದಾನಂದ್ ಪಟೇಲ್, ಸುಹೇಲ್,ಪ್ರಸನ್ನಕುಮಾರ್,ಅರಸೀಕೆರೆ ಸಂಘದ ಅಧ್ಯಕ್ಷ ಆನಂದ್, ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ತಾಲ್ಲೂಕು ಸಂಘಗಳ ಅಧ್ಯಕ್ಷರಾದ ಬಿ.ಬಿ.ಶಿವರಾಜು, ವೆಂಕಟೇಶ್, ಕಾಂತರಾಜು, ದಯಾನಂದ ಶೆಟ್ಟಿ ಇದ್ದರು.



### ವಿತರಕರು, ವರದಿಗಾರರಿಗೆ ಸನ್ಮಾನ

ತಾಲ್ಲೂಕಿನ ಹಿರಿಯ ಪತ್ರಕರ್ತರಾದ ರಾಮಚಂದ್ರು ಅವರಿಗೆ ಎಸ್.ಎನ್. ಗೋಪಿನಾಥ್ ಸ್ಮಾರಕ ಪ್ರಶಸ್ತಿ, ರವಿಶಂಕರ್ ಅವರಿಗೆ ಪಿ.ಶಾಂತಕುಮಾರ್ ಪ್ರಶಸ್ತಿ ಹಾಗು ಹಿರಿತನದ ಸೇವೆ ಪರಿಗಣಿಸಿ ಮಾಡಾಳು ಶಿವಲಿಂಗಪ್ಪ, ಬಿ.ಎಸ್.ಸೇತುರಾಂ ಅವರನ್ನು ಗೌರವಿಸಲಾಯಿತು. ಹಲವು ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರು ಹಾಗು ವಿತರಕರನ್ನು ಸನ್ಮಾನಿಸಿ ಗೌರವಿಸಲಾಯಿತು.

### ದಿನಪತ್ರಿಕೆ ಓದುವುದು ವೃತ್ತಿ

ದೃಶ್ಯ ಮಾಧ್ಯಮಗಳಿಗಿಂತ ಮುದ್ರಣ ಮಾಧ್ಯಮದ ವರದಿ ನಿಖರವಾಗಿರುತ್ತದೆ. ನಿತ್ಯ ದಿನ ಪತ್ರಿಕೆ ಓದುವುದನ್ನು ನಾವು ವೃತ್ತಿಯಾಗಿಸಿಕೊಂಡಿದ್ದೇವೆಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು. ಆಧುನಿಕ ತಂತ್ರಜ್ಞಾನ ಬೆಳೆದಂತೆ ವಿಶ್ವದ ವಿದ್ಯಮಾನಗಳೆಲ್ಲಾ ನಮ್ಮ ಅಂಗೈಯಲ್ಲಿರುತ್ತದೆ. ಸಾಮಾಜಿಕ ಜಾಲತಾಣಗಳ ಭರಾಟೆಯ ನಡುವೆಯೂ ಮುದ್ರಣ ಮಾಧ್ಯಮ ವಿಶ್ವಾಸಾರ್ಹತೆ ಉಳಿಸಿಕೊಂಡಿದೆ ಎಂದ ಅವರು, ನಗರದಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

# ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಿಲ್ಲ: ಸಿಮೆಂಟ್ ಮಂಜು

ಗರು ಆಗಮಿಸುತ್ತಾರೆ. ಪ್ರವಾಸೋದ್ಯಮವನ್ನು ಸ್ವಾಗತಿಸಿದರೂ, ದೇವಾಲಯದ ಆವರಣದಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಚಟುವಟಿಕೆಗಳಿಗೆ ಅವಕಾಶ ನೀಡಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದರು.

ದೇವಾಲಯಗಳು ಮನರಂಜನೆಯ ತಾಣಗಳಲ್ಲ. ಭಕ್ತಿ, ಶ್ರದ್ಧೆ ಮತ್ತು ಸಂಸ್ಕೃತಿಯ ಕೇಂದ್ರಗಳಾಗಿವೆ. ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಹೇಳಿದರು.

ದೇವಾಲಯದ ಸುರಕ್ಷತೆಗೆ ಅಗತ್ಯ ತಡೆಗೋಡೆ ನಿರ್ಮಾಣಕ್ಕೂ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮಣ್ಣು ಕುಸಿಯುವ ಅಪಾಯವಿರುವ ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ಆದ್ಯತೆಯಲ್ಲಿ ಕೈಗೊಳ್ಳಲಾಗುವುದು. ದೇವಾಲಯದ ಪಾವಿತ್ರ್ಯ ಕಾಪಾಡುವ ಉದ್ದೇಶದಿಂದ ಚಪ್ಪಲಿ ಹೊರಗಡೆ ಬಿಡುವುದು, ದೇವಾಲಯದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಸೂಚಿಸುವ ಫಲಕಗಳನ್ನು ಅಳವಡಿಸಲಾಗುವುದು. ಅಗತ್ಯವಿದ್ದರೆ ಪೊಲೀಸ್ ನಿಯೋಜಿಸಿ ನಿಗಾ ವಹಿಸಲಾಗುವುದೆಂದು ಹೇಳಿದರು.

ದೇವಾಲಯದ ಆಡಳಿತ ಹಾಗು ಸಂರಕ್ಷಣೆಗೆ ತಾತ್ಕಾಲಿಕ ಸಮಿತಿ ರಚಿಸುವ ಕುರಿತು ಸ್ಥಳೀಯರು ಮನವಿ ಸಲ್ಲಿಸಿದ್ದು, ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್ ಅವರೊಂದಿಗೆ ಚರ್ಚಿಸಿ ಸರ್ಕಾರದ ಮಾರ್ಗಸೂಚಿಗಳಂತೆ ಶೀಘ್ರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು.

ತಹಶೀಲ್ದಾರ್ ಸುಪ್ರಿತಾ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರನ್, ಗ್ರಾಮಾಂತರ ಠಾಣಾ ವೃತ್ತ ನಿರೀಕ್ಷಕ ಪಾಟೀಲ್, ವಲಯ ಅರಣ್ಯಾಧಿಕಾರಿ ಹೇಮಂತ್ ಸೇರಿ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಜನಪರ ಸೇವಾ ಕಾರ್ಯಗಳಿಂದ ಸಾಮಾಜಿಕ ಪರಿವರ್ತನೆ

» ಮೊದಲನೇ ಪುಟದಿಂದ

ರುವುದು ಸಂತಸದ ವಿಷಯ ಎಂದರು.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಅವರು ಮಾತನಾಡಿ, ಡಾ. ವೀರಭದ್ರಪ್ಪ ಅವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿವಿಧ ಸಂಘ-ಸಂಸ್ಥೆಗಳ ಮೂಲಕ ಸಾರ್ವಜನಿಕ ಹಿತಕ್ಕಾಗಿ ಶ್ರಮಿಸುತ್ತಿರುವ ಅವರ ಜೀವನ ಯುವಕರಿಗೆ ಮಾದರಿಯಾಗಿದ್ದು, ಇಂತಹ ಸೇವಾ ಮನೋಭಾವವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕೆಂದರು.

ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಮಾತನಾಡಿ, ಸಮಾಜದ ಒಳಿತಿಗಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವ ಅನೇಕರು ಬೆಳಕಿಗೆ ಬಾರದೇ ಉಳಿದಿದ್ದಾರೆ. ಇಂತಹ ಸಮಾಜ ಸೇವಕರನ್ನು ಜಿಲ್ಲೆ ಹಾಗು ರಾಜ್ಯ ಮಟ್ಟದಲ್ಲಿ ಗುರುತಿಸಿ ಗೌರವಿಸುವುದು ಉತ್ತಮ ಪರಂಪರೆ. ತಮ್ಮ ವೃತ್ತಿಯ ಜೊತೆಗೆ ಸಾಮಾಜಿಕ ಸೇವೆಗೆ ಸಮಯ ಮೀಸಲಿಟ್ಟು ಜನೋಪಯೋಗಿ ಕಾರ್ಯಗಳನ್ನು ನಡೆಸುತ್ತಿರುವ ಡಾ. ವೀರಭದ್ರಪ್ಪ ಅವರ ಸೇವೆ ಶ್ಲಾಘನೀಯ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಜಿಲ್ಲೆ ಸಾಮಾಜಿಕ, ಸಾಂಸ್ಕೃತಿಕ ಹಾಗು ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಅನೇಕ ಹಿರಿಯರನ್ನು ಹೊಂದಿದೆ. ಅಂತಹವರಲ್ಲಿ ಡಾ.ವೀರಭದ್ರಪ್ಪ ಅವರ ಸೇವೆ ವಿಶಿಷ್ಟ ಸ್ಥಾನ ಪಡೆದಿದ್ದು, ಅವರಂತಹ ವ್ಯಕ್ತಿತ್ವಗಳು ಜಿಲ್ಲೆಯ ಅಭಿವೃದ್ಧಿ ಚಿಂತನೆಗೆ ಪ್ರೇರಣೆಯಾಗಿದ್ದಾರೆಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಹಿರಿಯರು ಹಾಕಿಕೊಟ್ಟ ಆದರ್ಶದ ಹಾದಿಯಲ್ಲಿ ಸಾಗಿದಾಗ ಸಮಾಜ ಇನ್ನಷ್ಟು ಸದೃಢವಾಗಲಿದೆ ಎಂದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಡಾ.ವೈ.ಎಸ್.ವೀರಭದ್ರಪ್ಪ ಅವರು ಹಲವು ಸಂಘ-ಸಂಸ್ಥೆಗಳ ಮೂಲಕ ಯಾವುದೇ ಫಲಾಪೇಕ್ಷೆಯಿಲ್ಲದೆ ಜಿಲ್ಲೆಯ ಜನರಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರಂತಹ ವ್ಯಕ್ತಿತ್ವಗಳಿಗೆ ಗೌರವ ಸಲ್ಲಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕೆಂದು ಆಶಿಸಿದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಶಾಸಕ ಸಿ.ಎನ್.ಬಾಲಕೃಷ್ಣ, ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಎಂಸಿಇ ಆಡಳಿತ ಮಂಡಳಿ ಅಧ್ಯಕ್ಷ ಬಿ.ಆರ್.ಗುರುದೇವ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್. ಮುದ್ದೇಗೌಡ, ಹುಡಾ ಮಾಜಿ ಅಧ್ಯಕ್ಷ ಬಿ.ಕೆ.ಮಂಜುನಾಥ್, ಸೇವಾರತ್ನ ಕೃತಿಯ ಸಂಪಾದಕಿ ವನಜಾಕ್ಷಿ ಬೆಟ್ಟದಾಲೂರು, ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಪಿ.ಐಸಾಮಿಗೌಡ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ನವಿಲೆ ಪರಮೇಶ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶ್‌ಗೌಡ, ಹಸಿರುಭೂಮಿ ಪ್ರತಿಷ್ಠಾನ ಸಂಸ್ಥಾಪಕ ಆರ್.ಪಿ.ವೆಂಕಟೇಶಮೂರ್ತಿ, ಕಾಂಗ್ರೆಸ್ ಮುಖಂಡ ಬಿ.ಪಿ.ಮಂಜೇಗೌಡ, ಅಹಮದ್ ಹಗರೆ, ರವಿ ನಾಕಲಗೂಡು, ಸವಿತಾ ಶಿವಕುಮಾರ್, ವೈ.ವಿ.ಗಂಧನ ತೇಜಸ್ ಇತರರಿದ್ದರು.

## ಎತ್ತಿನಹೊಳೆ ಪೈಪ್‌ಲೈನ್ ದುರಸ್ತಿಗೆ ಕ್ರಮ

» ಮೊದಲನೇ ಪುಟದಿಂದ

ಸಾಗರ ಅಣೆಕಟ್ಟೆ ತಲುಪಿದೆ. ಯೋಜನೆ ಪ್ರಾರಂಭವಾಗುವ ಹೊಂಗಡಹಳ್ಳದಿಂದ 126 ಕಿ.ಮೀ. ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಮುಖ್ಯವಾಗಿ ಹೊಂಗಡಹಳ್ಳ, ಕಾಡುಮನೆ, ಎತ್ತಿನಹೊಳೆ, ಕೆರೆಹೊಳೆ, ಕೆಂಬಹಳ್ಳಿ, ದೊಡ್ಡನಾಗರದಂತಹ ಪ್ರದೇಶಗಳಲ್ಲಿ ಸೂಕ್ಷ್ಮ ಕೆಲಸಗಳನ್ನು ನಿರ್ವಹಿಸಲಾಗಿದೆ. 126 ಕಿ.ಮೀ. ವ್ಯಾಪ್ತಿಯ ಪೈಪ್‌ಗಳಲ್ಲಿ ಅಂದಾಜು 20 ಸಾವಿರ ಜಾಯಿಂಟ್‌ಗಳಿವೆ. ಅಳವಡಿಕೆ ಹಂತದಲ್ಲಿ ಎಲ್ಲಾ ಜಾಯಿಂಟ್‌ಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. 207 ವೆಲ್ಡಿಂಗ್ ವಿಸ್ತೀರ್ಣ ಹೊಂದಿದೆ. ಪೈಪ್ ಅಳವಡಿಸುವಾಗ ಅಲ್ಟ್ರಾಸೋನಿಕ್ ಎಂಬ ಪರೀಕ್ಷೆಯನ್ನು ಕೈಗೊಳ್ಳಲಾಗಿದೆ. ಹೀಗೆಂದರೆ 1 ಕಿ.ಮೀ. ವರೆಗೆ ನೀರಿನ ಹರಿವು ಸ್ಥಗಿತಗೊಳಿಸಿ 24 ಗಂಟೆಗಳ ವರೆಗೆ ಹೈಡ್ರೋ ಟೆಸ್ಟ್ ಮಾಡಲಾಗುತ್ತದೆ. ಆಗ ಎಲ್ಲಿಯೂ ಕಾಣಿಸಿಕೊಳ್ಳದ ಬಿರುಕು ಈಗ ಕಾಣಿಸಿಕೊಂಡಿರುವುದು ಇಂಜಿನೀಯರ್‌ಗಳಿಗೂ ಅಚ್ಚರಿ ಮೂಡಿಸಿದೆ.

ಮಳೆಗಾಲ ಸಂದರ್ಭದಲ್ಲಿ ಮಣ್ಣು ಸ್ವಲ್ಪ ಸಡಿಲಗೊಂಡು ರಂಧ್ರ ಉಂಟಾಗಿ ಅದರಿಂದ ನೀರು ಸೋರಿಕೆಯಾಗಿ ನಂತರ ಭಾರೀ ಪ್ರಮಾಣದಲ್ಲಿ ಚಿಮ್ಮಿದೆ. ಪೈಪ್‌ಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗದಂತೆ ತಡೆಯಲು ಪ್ರತಿ 500 ಮೀಟರ್‌ಗೆ ಒಂದು ಆ್ಯಂಕರ್ ಬ್ಲಾಕ್ ಹಾಕಲಾಗಿದೆ. ಇದು ಏನೇ ಅವಘಡದ ಮುನ್ಸೂಚನೆ ಸಿಕ್ಕರೂ ಮೊದಲೇ ಅರಿಯಲು ಸಹಾಯವಾಗುತ್ತದೆ.

**8 ಕೋ. ರೂ. ಪ್ರಸ್ತಾವನೆಗೆ ಸಿದ್ಧತೆ**

126 ಕಿ.ಮೀ. ಪೈಪ್‌ಲೈನ್‌ಗೆ ನಾಲ್ಕು ಮಾರ್ಗಗಳನ್ನು ಮಾಡಿಕೊಳ್ಳಲಾಗಿದೆ. ಆದರೆ, ಒಂದು ಕಡೆ ಅವಘಡ ಸಂಭವಿಸಿದೆ ಉಳಿದ 3 ಕಡೆಗೂ ನೀರಿನ ಹರಿವು ಸ್ಥಗಿತಗೊಳಿಸಬೇಕಾಗುತ್ತದೆ. ಆದ್ದರಿಂದ ಒಟ್ಟು ಎಂಟು ಕಡೆ ವಾಲ್ವ್‌ಗಳನ್ನು ಹಾಕಿದರೆ ಸಮಸ್ಯೆ ಕಾಣಿಸಿಕೊಳ್ಳುವ ಮಾರ್ಗದಲ್ಲಿ ಮಾತ್ರ ನೀರಿನ ಹರಿವು ನಿಲ್ಲಿಸಿ ಉಳಿದ ಮಾರ್ಗಗಳ ಮೂಲಕ ನೀರು ಹರಿಯುವಂತೆ ಮಾಡಬಹುದಾಗಿದೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ.

# ಎಸ್‌ಐಆರ್: ಬೇಲೂರಿನಲ್ಲಿ ಶೇ.54.41 ಡಿಜಿಟಲೀಕರಣ ಪೂರ್ಣ

• ಪ್ರಜೋದಯ ವರದಿ

**ಬೇಲೂರು:** ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಚುರುಕುಗೊಂಡಿದ್ದು, ಇದುವರೆಗೆ 1,11,423 ಎನ್ಯುಮರೇಷನ್ ಫಾರ್ಮ್‌ಗಳನ್ನು ಡಿಜಿಟಲೀ ಕರಣಗೊಳಿಸಲಾಗಿದ್ದು, ಶೇ.54.41ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಚುನಾವಣಾ ನೋಂದಣಿ ಅಧಿಕಾರಿ ರಂಜಿತ್ ಕುಮಾರ್ ಅವರು ತಿಳಿಸಿದರು.

ತಾಲ್ಲೂಕು ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಒಟ್ಟು 2,04,786 ಮತದಾರರಿದ್ದು, ಅವರಿಗಾಗಿ 270 ಮತಗಟ್ಟೆಗಳನ್ನು ಗುರುತಿಸಲಾಗಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ನವೀಕರಿಸುವ ಕಾರ್ಯ ನಡೆಯುತ್ತಿದ್ದು, ಜುಲೈ 20ರೊಳಗೆ ಶೇ.100 ಡಿಜಿಟಲೀಕರಣ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಪರಿಷ್ಕರಣೆ ವೇಳೆ ಹಲವು ಮಹತ್ವದ ಅಂಶಗಳು ಬೆಳಕಿಗೆ ಬಂದಿದ್ದು, ಪರಿಶೀಲನೆ ಸಂದರ್ಭದಲ್ಲಿ 421 ಮಂದಿ ಗೈರು ಎಂದು ಗುರುತಿಸಲಾಗಿದೆ. 1,914 ಜನರು ಸ್ಥಳಾಂತರಗೊಂಡಿರುವುದು ದಾಖಲಾಗಿದ್ದು, 3,387 ಜನರು ಮೃತಪಟ್ಟಿದ್ದಾರೆ.



ಈ ಮಾಹಿತಿಗಳನ್ನು ಚುನಾವಣಾ ಆಯೋಗದ ನಿಯಮಾನುಸಾರ ಮತದಾರರ ಪಟ್ಟಿಯಲ್ಲಿ ಪರಿಷ್ಕರಿಸಲಾಗುತ್ತಿದೆಂದು ತಿಳಿಸಿದರು.

ಬಿಎಲ್‌ಒ ಮನೆಗಳಿಗೆ ಭೇಟಿ ನೀಡಿ ಅರ್ಜಿ ವಿತರಿಸದಿದ್ದರೆ ಅಥವಾ ಭರ್ತಿ ಮಾಡುವಲ್ಲಿ ತೊಂದರೆ ಎದುರಾದರೆ ಸಾರ್ವಜನಿಕರು ನೇರವಾಗಿ ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ (ಎಇಆರ್‌ಒ) ಅಥವಾ ಚುನಾವಣಾ ನೋಂದಣಿ ಅಧಿಕಾರಿ (ಇಆರ್‌ಒ) ಅವರನ್ನು ಸಂಪರ್ಕಿಸಬೇಕು. ದೂರು ಬಂದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹರಿಸುವ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಯಾವುದೇ ಲೋಪವಾಗದಂತೆ ಬಿಎಲ್‌ಒಗಳಿಗೆ ಜಿಲ್ಲಾ ಮಟ್ಟದಲ್ಲಿ ಸಮಗ್ರ ತರಬೇತಿ ನೀಡಲಾಗಿದೆ. ಜಿಲ್ಲಾಧಿಕಾರಿ ಮಾರ್ಗದರ್ಶನದಲ್ಲಿ ಮಾಸ್ಟರ್ ಟ್ರೈನರ್ ಹಾಗು ಮೊಬೈಲ್ ಆ್ಯಪ್ ಬಳಕೆಯ ಕುರಿತು ವಿಶೇಷ ತರಬೇತಿ ನೀಡಿರುವುದರಿಂದ ಕಾರ್ಯ ಸುಗಮವಾಗಿ ನಡೆಯುತ್ತಿದೆ ಎಂದು ಹೇಳಿದರು.

ಪ್ರತಿ ಮತದಾರರು ತಮ್ಮ ಹೆಸರು, ವಿಳಾಸ ಹಾಗು ಇತರ ವಿವರಗಳನ್ನು ಪರಿಶೀಲಿಸಿ, ನಿಖರ ಮಾಹಿತಿಯನ್ನು ನೀಡಿ ಬಿಎಲ್‌ಒಗಳೊಂದಿಗೆ ಸಹಕರಿಸಬೇಕು. ನಿಖರ ಮತದಾರರ ಪಟ್ಟಿಯೇ ಪ್ರಜಾಪ್ರಭುತ್ವದ ಭದ್ರ ಬುನಾದಿಯಾಗಿದ್ದು, ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ರಂಜಿತ್ ಕುಮಾರ್ ಮನವಿ ಮಾಡಿದರು.

**ಡಿಜಿಟಲೀಕರಣ ಅರಸೀಕೆರೆ ಪ್ರಥಮ**

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು, ತಾಲ್ಲೂಕಿನಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಸುಗಮವಾಗಿ ನಡೆಯುತ್ತಿದೆ. ಒಟ್ಟು 2,04,782 ಮತದಾರರಿದ್ದು, ಎಲ್ಲರಿಗೂ ಎನ್ಯೂಮರೇಷನ್ ಅರ್ಜಿ ವಿತರಿಸಲಾಗಿದೆ. ಡಿಜಿಟಲೀಕರಣ ಪ್ರಗತಿಯಲ್ಲಿ ಅರಸೀಕೆರೆ ಮೊದಲ ಸ್ಥಾನದಲ್ಲಿದ್ದು, ಬೇಲೂರು ಎರಡನೇ ಸ್ಥಾನದಲ್ಲಿದೆ. ನಿಗದಿತ ಅವಧಿಯೊಳಗೆ ಡಿಜಿಟಲೀಕರಣ ಪೂರ್ಣಗೊಳಿಸಲಾಗುವುದೆಂದರು.

ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ಈ ಮಹತ್ವದ ಕಾರ್ಯದಲ್ಲಿ ಸಾರ್ವಜನಿಕರು ಅಗತ್ಯ ದಾಖಲೆಗಳು ಹಾಗೂ ನಿಖರ ಮಾಹಿತಿಯನ್ನು ಒದಗಿಸಿ ಬಿಎಲ್‌ಒಗಳೊಂದಿಗೆ ಸಹಕರಿಸಬೇಕು. ಮತದಾರರ ಪಟ್ಟಿಯನ್ನು ದೋಷ ರಹಿತವಾಗಿ ಸಿದ್ಧಪಡಿಸುವಲ್ಲಿ ಪ್ರತಿಯೊಬ್ಬರ ಸಹಭಾಗಿತ್ವ ಅಗತ್ಯವಾಗಿದೆ ಎಂದು ಮನವಿ ಮಾಡಿದರು.

ಬಿಎಸ್ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಗಂಗಾಧರ ಬಹುಜನ್, ಕಾಂಗ್ರೆಸ್ ಬಿಎಲ್‌ಎ ಜಮಾಲ್, ಬಿಜೆಪಿಯ ರಂಗನಾಥ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸಂಜಯ್ ಸೌದಿ, ಬಿಎಸ್ಪಿ ತಾಲ್ಲೂಕು ಅಧ್ಯಕ್ಷ ಪ್ರಕಾಶ್ ಬೆಳ್ಳೊಟ್ಟೆ, ರಾಘವೇಂದ್ರ, ಬಸವರಾಜ್ ಸಿಗಾವಿ, ಗೋಪಿ, ಲಕ್ಷ್ಮಣ್ ಹಾಜರಿದ್ದರು.

## ಟ್ರ್ಯಾಕ್ಟರ್ ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

**ಬೇಲೂರು:** ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಹಿಂಬದಿ ಕುಳಿತಿದ್ದ ಯುವಕ ಗಂಭೀರ ಗಾಯಗೊಂಡಿರುವ ಘಟನೆ ಬೇಲೂರು-ಚಿಕ್ಕಮಗಳೂರು ರಸ್ತೆಯ ಭಾರತ್ ಕನ್ವೆನ್ಷನ್ ಹಾಲ್ ಸಮೀಪ ಭಾನುವಾರ ನಡೆದಿದೆ.

ಹುಲಗುಂಡಿ ಗ್ರಾಮದ ಹೆಚ್.ಎಲ್.ರವಿ (24) ಮೃತ ಯುವಕ. ಸಂಬಂಧಿ ಕಾರ್ತಿಕ್‌ನನ್ನು ಬೈಕ್‌ನ ಹಿಂಬದಿ ಕೂರಿಸಿಕೊಂಡು ಹೊನ್ನೇನಹಳ್ಳಿ ಕಾವಲಿನಿಂದ ಗ್ರಾಮಕ್ಕೆ ವಾಪಾಸ್ಸಾಗುತ್ತಿದ್ದಾಗ ಬೇಲೂರು ಕಡೆಯಿಂದ ವೇಗವಾಗಿ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಗಾಯಾಳು ಕಾರ್ತಿಕ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ರ್ಯಾಕ್ಟರ್ ಚಾಲಕ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಫಿ, ಭತ್ತ, ಅಡಿಕೆ, ಬಾಳೆ ಸೇರಿ ಅಪಾರ ಪ್ರಮಾಣದ ಬೆಳೆ ಹಾನಿ


# 40ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಸಂಚಾರ

• ಪ್ರಜೋದಯ ವರದಿ

**ಬೇಲೂರು:** ರೈತರ ಜಮೀನಿನಲ್ಲಿ ಕುರಿಮಂದೆಯಂತೆ ಕಾಡಾನೆಗಳ ಹಿಂಡು ನುಗ್ಗಿ ಕಾಫಿ, ಭತ್ತ, ಅಡಿಕೆ, ಬಾಳೆ ಸೇರಿ ರೈತರು ಬೆಳೆದಿರುವ ಹಲವು ಬೆಳೆಗಳನ್ನು ನಾಶ ಮಾಡಿರುವ ಘಟನೆ ತಾಲ್ಲೂಕಿನ ಬೆಳ್ಳಾವರ-ಕಣಗುಪ್ಪೆ ಗ್ರಾಮಗಳ ಬಳಿ ನಡೆದಿದೆ.

ಮರಿಗಳು ಸೇರಿ 40ಕ್ಕೂ ಹೆಚ್ಚಿರುವ ಕಾಡಾನೆಗಳು ಬೆಳಿಗ್ಗೆಯೇ ರೈತರ ಜಮೀನಿನಲ್ಲಿ ಸಂಚಾರ ಮಾಡಿವೆ. ಕಾಡಾನೆಗಳ ಉಪಟಳದಿಂದ ಗ್ರಾಮಸ್ಥರು ಹೈರಾಣಾಗಿದ್ದು, ಆಹಾರ ಅರಸಿ ವಾಸದ ಮನೆಯ ಸಮೀಪವೇ ಬರುತ್ತಿವೆ. ಮನೆಯಿಂದ ಹೊರ ಬರಲು, ಜಮೀನುಗಳಿಗೆ ತೆರಳಲು ಮಲೆನಾಡು ಭಾಗದ ಜನರು ಭಯಪಡುತ್ತಿದ್ದಾರೆ.

ಸಕಲೇಶಪುರ ಹಾಗು ಬೇಲೂರು ಭಾಗದ ಜನರು, ರೈತರ ನಿದ್ದೆಗೆಡಿಸಿದ್ದು, ಕಾಡಾನೆಗಳ ಹಾವಳಿಯಿಂದ ರೋಸಿ



ಹೋಗಿದ್ದಾರೆ. ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯದ ಸರ್ಕಾರ ಹಾಗೂ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು, ಇನ್ನಾದರೂ ಕಾಡಾನೆಗಳ ದಾಂಧಲೆಗೆ ತಡೆ ಹಾಕುವಂತೆ ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ. ಇಲ್ಲವಾದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಮಾಡುವ ಎಚ್ಚರಿಕೆ ನೀಡಿದ್ದಾರೆ.

**ಎಲ್ಲೆಲ್ಲಿ ಕಾಡಾನೆ ಸಂಚಾರ**

ಸಕಲೇಶಪುರ ತಾಲ್ಲೂಕಿನ ಆಲುವಳ್ಳಿ ಹಾಗು ಕೆ.ಮಂಚಳ್ಳಿ ಗ್ರಾಮದ ಮಾವಿನಗುಂಡಿ ಕಾಡು, ದೀಣೆಕೆರೆ ಗ್ರಾಮದ ಈಶ್ವರ ಮಠದ ದೇವಸ್ಥಾನ ದೀಣೆಕೆರೆ ಮಠ ಹಾಗು ಬ್ಯಾದನೆ ಅಣ್ಣಾಮಲೈ ಎಸ್ಟೇಟ್ 6ನೇ ಬ್ಲಾಕ್, ಕೆಸಗುಲಿ ಗ್ರಾಮದ ಕೆಸಗುಲಿ ಎಸ್ಟೇಟ್, ಪಿಂಟೋ ಕಾಡು ಸುತ್ತಮುತ್ತ ಕಾಡಾನೆಗಳು ಕಂಡುಬಂದಿರುತ್ತವೆ.

ಐಗೂರು ಗ್ರಾಮದ ನಿರ್ಮಾ ಎಸ್ಟೇಟ್, ಬಾಚೀಹಳ್ಳಿ ಗ್ರಾಮದ ದೇವರ ಬೆಟ್ಟ, ತಂಬಲಗೇರಿ ಗ್ರಾಮದ ಎಳರ್ ಗದ್ದೆ, ಮರ್ಜನಹಳ್ಳಿ ಬೆಟ್ಟ, ಮತ್ತೂರು ಹಾಗು ಮರಗಳ್ಳಿ ಗ್ರಾಮದ ಬಿದಿರು ನೆಡುತೋಪು, ಹಾಡ್ಲಹಳ್ಳಿ ಗ್ರಾಮದ ಬಸರಿ ಹಡ್ಲು, ಜೇಡಿಗದ್ದೆ ಗ್ರಾಮದ ಕಸ ವಿಲೇವರಿ, ಹಾಡ್ಯಾ ಗ್ರಾಮದ ದೇವಿ ಎಸ್ಟೇಟ್, ಅಕೇಶಿಯಾ ಫಾರೆಸ್ಟ್ ನಲ್ಲಿ ಕಾಡಾನೆಗಳು ಕಾಣಿಸಿಕೊಂಡಿವೆ.

ಬೇಲೂರು ತಾಲ್ಲೂಕಿನ ಚಿಕ್ಕಹಸಡೆ ಗ್ರಾಮದ ಜಾರ್ಗಲ್ ತಿಮ್ಮೇಗೌಡ್ರು ತೋಟ, ಕಾನಹಳ್ಳಿ ಫಾರೆಸ್ಟ್, ಮಹಲ ಗ್ರಾಮದ ಮಹಲ ಎಸ್ಟೇಟ್, ಅರಮನೆ ಗುಡ್ಡ, ಹಿರಿಗರ್ಜೆ ಕೊಪ್ಪಲು ಹಾಗು ಆಲೂರು ತಾಲ್ಲೂಕಿನ ಹಳ್ಳಿಯೂರು ಗ್ರಾಮದ ಹಳ್ಳಿಯೂರು ಮಂಟಿ, ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಕಟ್ಟೇಪುರ ಫಾರೆಸ್ಟ್ ನಲ್ಲಿ ಕಾಡಾನೆಗಳು ಕಾಣಿಸಿಕೊಂಡಿವೆ ಎಂದು ಇಟಿಎಫ್ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

## ಸದೃಢ ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಕೊಡುಗೆ ಅತ್ಯವಶ್ಯ

» ಮೊದಲನೇ ಪುಟದಿಂದ

ನಿವೇಶನವನ್ನು ಸರ್ಕಾರದಿಂದ ಒದಗಿಸಲಾಗಿದೆ. ಸುಂದರ ಹಾಗು ಸುಸಜ್ಜಿತ ಪತ್ರಿಕಾ ಭವನ ನಿರ್ಮಾಣ ಮಾಡಲು ನಾನೇ ಪೂರ್ಣ ಪ್ರಮಾಣದಲ್ಲಿ ಹಣ ಒದಗಿಸುತ್ತೇನೆ. ಮುಂದಿನ ಏಳೆಂಟು ತಿಂಗಳೊಳಗೆ ಭವನ ನಿರ್ಮಾಣದ ಕೆಲಸ ಮುಗಿಸೋಣ. ಮುಂದಿನ ಪತ್ರಿಕಾ ದಿನಾಚರಣೆ ಸಂಘದ ಆವರಣದಲ್ಲೇ ನಡೆಯಲಿದೆ ಎಂದು ಭರವಸೆ ನೀಡಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜಿ.ಆರ್.ಕೆಂಚೇಗೌಡ ಅವರು ಮಾತನಾಡಿ, ಪತ್ರಕರ್ತರು ಮಳೆ, ಗಾಳಿ, ಬಿಸಿಲು ಎನ್ನದೆ ಸತ್ಯವನ್ನು ಹುಡುಕಿ ಜನರಿಗೆ ವಸ್ತುನಿಷ್ಠ ವರದಿ ನೀಡುತ್ತಾರೆ. ಸರ್ಕಾರದ ಯೋಜನೆ ಹಾಗು ನಿರ್ಧಾರಗಳನ್ನು ಜನಸಾಮಾನ್ಯರಿಗೆ ತಲುಪಿಸಿ ಜನಪರ ಕಾರ್ಯಗಳಿಗೆ ಒತ್ತಾಸೆಯಾಗಿ ನಿಲ್ಲುತ್ತಾರೆಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ರಾಜಕೀಯವಾಗಿ ತನ್ನ ಶಕ್ತಿ, ಪ್ರಾಬಲ್ಯ ಹೊಂದಿರುವ ಜಿಲ್ಲೆಗೆ ಹೊರಗಿನವರು ಉಸ್ತುವಾರಿ ಸಚಿವರಾಗಿ ಬರುವ ಬದಲು ನಮ್ಮವರೇ ಆಗಿರುವ ಶಿವಲಿಂಗೇಗೌಡರು ಸಚಿವರಾಗಬೇಕೆಂದು ಆಶಿಸಿದರು.

ಅರಸೀಕೆರೆ ಸಂಘದ ಅಧ್ಯಕ್ಷ ಆನಂದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ತಹಶೀಲ್ದಾರ್ ಸಂತೋಷ್ ಕುಮಾರ್, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ನಗರಸಭೆ ನಿಕಟಪೂರ್ವ ಅಧ್ಯಕ್ಷ ಎಂ. ಸಮೀವುಲ್ಲಾ, ಅನಂತ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಅನಂತ್ ಕುಮಾರ್, ನಗರಸಭೆ ಮಾಜಿ ಸದಸ್ಯ ದರ್ಶನ್, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಖಜಾಂಚಿ ಬೆಳವಾಡಿ ಪ್ರಕಾಶ್ ಮತ್ತಿತರರಿದ್ದರು.

## ಅಪ್ರಾಪ್ತೆ ಮೇಲಿನ ದೌರ್ಜನ್ಯ ಖಂಡಿಸಿ ಜಾಗೃತಿ ಜಾಥಾ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ರಾಜಸ್ಥಾನದಲ್ಲಿ ಬಾಲಕಿಯ ಮೇಲೆ ನಡೆದ ಅಮಾನವೀಯ ಲೈಂಗಿಕ ದೌರ್ಜನ್ಯವನ್ನು ಖಂಡಿಸಿ ಹಾಗು ಸಂತ್ರಸ್ತೆಗೆ ನ್ಯಾಯ ದೊರಕಬೇಕೆಂದು ಆಗ್ರಹಿಸಿ ಅಕ್ಷರ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ಸೋಮವಾರ ಪಟ್ಟಣದಲ್ಲಿ ಜಾಥಾ ನಡೆಸಲಾಯಿತು. 300ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಹಾಗು ಸಿಬ್ಬಂದಿ ಕೈಯಲ್ಲಿ ಜಾಗೃತಿ ಫಲಕಗಳನ್ನು ಹಿಡಿದು, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಯ ಪರ ಹಾಗು ಲೈಂಗಿಕ ದೌರ್ಜನ್ಯ ವಿರೋಧಿ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು. ಶಾಲಾ ಆವರಣದಿಂದ ಆರಂಭವಾದ ಜಾಥಾ ಮುಖ್ಯ ರಸ್ತೆ, ಮಾರುಕಟ್ಟೆ ರಸ್ತೆ, ಬಸ್ ನಿಲ್ದಾಣ, ನವೋದಯ ವೃತ್ತ, ಮೈಸೂರು ರಸ್ತೆ ಮೂಲಕ ಸುಮಾರು 5 ಕಿ.ಮೀ. ಸಂಚರಿಸಿ ನ್ಯಾಯಾಲಯ ಮುಂಭಾಗ ಸಮಾರೋಪಗೊಂಡಿತು.

## ಗಾಂಜಾ ಮಾರಾಟ: ಮಹಿಳೆ ಬಂಧನ

• ಪ್ರಜೋದಯ ವರದಿ

**ಹೊಳೆನರಸೀಪುರ:** ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿ ಮಹಿಳೆಯನ್ನು ಬಂಧಿಸಿದ್ದು, ಒಬ್ಬ ಆರೋಪಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ಕಬ್ಬೂರು ಗ್ರಾಮದ ಬಳಿ ನಡೆದಿದೆ. ಶೀಲಾ ಬಂಧಿತ ಮಹಿಳೆ, ಜಬಿ ಪರಾರಿಯಾದ ಆರೋಪಿ.

ಬಂಧಿತ ಮಹಿಳೆಯಿಂದ 7 ಕೆಜಿ ಗಾಂಜಾ, ಒಂದು ಸ್ಕೂಟಿ, ಒಂದು ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಮೇಲೂರು ಗ್ರಾಮದ ಶೀಲಾ ಸ್ಕೂಟಿಯಲ್ಲಿ ಬಂದಿದ್ದು ಇದೇ ಗ್ರಾಮದ ಜಬಿ ಕಾರಿನಲ್ಲಿ ಗಾಂಜಾ ಸಮೇತ ಆಗಮಿಸಿ, ನಿರ್ಜನ ಪ್ರದೇಶದಲ್ಲಿ ಗಾಂಜಾ ತಂದು ಮಾರಾಟ ಮಾಡಲು ಯತ್ನಿಸುತ್ತಿದ್ದರು.

ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ, ಪೊಲೀಸರು ದಾಳಿ ಮಾಡುತ್ತಿದ್ದಂತೆ ಜಬಿ ಕಾರು ಬಿಟ್ಟು ಪರಾರಿಯಾಗಿದ್ದು ಏಳು ಕೆಜಿ ಗಾಂಜಾ ಸಮೇತ ಶೀಲಾಳನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಹಳ್ಳಿ ಮೈಸೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಾಲಾ ಮಕ್ಕಳಿಗೆ ಗುರುತಿನ ಚೀಟಿ ವಿತರಣೆ

• ಪ್ರಜೋದಯ ವರದಿ

**ಕೊಣನೂರು:** ಅರಕಲಗೂಡು ತಾಲ್ಲೂಕು ಕೊಣನೂರು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ನಗರದ ಆದಿ ಕರ್ನಾಟಕ ಕಿರಿಯ ಪ್ರಾಥಮಿಕ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಎಂ.ಆರ್.ರಂಜಿನಿ ಅವರು ತಮ್ಮ ವೆಚ್ಚದಲ್ಲಿ ಗುರುತಿನ ಚೀಟಿಗಳನ್ನು ಸೋಮವಾರ ವಿತರಿಸಿದರು.



ಎಂ.ಆರ್.ರಂಜಿನಿ ಅವರು ಮಾತನಾಡಿ, ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಕಡಿಮೆಯಿಲ್ಲ. ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಗುಣಮಟ್ಟದ ಶಿಕ್ಷಣವೂ ಉತ್ತಮವಾಗಿ ದೊರೆಯುತ್ತಿದೆ. ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯ ಮೂಡಬೇಕೆಂಬ ಉದ್ದೇಶದಿಂದ ಮಕ್ಕಳಿಗೆ ಅಗತ್ಯವಾಗಿರುವ ಗುರುತಿನ ಚೀಟಿಗಳನ್ನು ಸ್ವಂತ ಖರ್ಚಿನಲ್ಲಿ ಮಾಡಿಸಿ ಕೊಟ್ಟಿರುವುದಾಗಿ ತಿಳಿಸಿದರು.

ಪ್ರತಿ ವಿದ್ಯಾರ್ಥಿಯೂ ಉತ್ತಮ ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೇರಬೇಕು. ಮುಂದೆಯೂ ಶಾಲೆಯ ಅಭಿವೃದ್ಧಿಗೆ ಅಗತ್ಯವಾದ ಸಹಕಾರ ನೀಡಲು ಸದಾ ಸಿದ್ಧರಿರುವುದಾಗಿ ಹೇಳಿದರು.

ಮುಖ್ಯ ಶಿಕ್ಷಕ ಕುಮಾರ್ ಅವರು ಮಾತನಾಡಿ, ವಿದ್ಯಾರ್ಥಿಗಳ ಸುರಕ್ಷತೆ ಹಾಗು ಶಾಲೆಯ ಶಿಸ್ತು ಕಾಪಾಡುವಲ್ಲಿ ಗುರುತಿನ ಚೀಟಿಗಳು ಸಹಕಾರಿಯಾಗಲಿವೆ ಎಂದರು. ಶಿಕ್ಷಕಿ ಮಂಜುಳಾ, ವಿದ್ಯಾರ್ಥಿಗಳು ಹಾಗು ಶಾಲಾ ಸಿಬ್ಬಂದಿ ಹಾಜರಿದ್ದರು.

# ಕೆಆರ್‌ಎಸ್ ವಿರುದ್ಧ ದಲಿತ ಮುಖಂಡರ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ರಾಷ್ಟ್ರ ಸೇನೆ ಪದಾಧಿಕಾರಿಗಳು ತಾಲ್ಲೂಕಿನ ಮೊಸಳೆ ಗ್ರಾಮದ ದಲಿತ ಮುಖಂಡ ಚಂದ್ರು ಅವರ ವಿರುದ್ಧ ಭೂ ಕಬಳಿಕೆ ಆರೋಪ ಮಾಡಿದ್ದು, ತೇಜೋವಧೆಯನ್ನು ನಿಲ್ಲಿಸದಿದ್ದರೆ ಬೆಂಗಳೂರಿನ ಕೆಆರ್‌ಎಸ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ದಲಿತ ಮುಖಂಡ ಹೆಚ್.ಕೆ.ಸಂದೇಶ್ ಅವರು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಚಂದ್ರು ಅವರ ರಾಜಕೀಯ ಏಳಿಗೆ ಸಹಿಸದೆ ಹಗೆತನ ಸಾಧಿಸಲಾಗುತ್ತಿದೆ. ಮೊಸಳೆ ಗ್ರಾಮದ ಜಗದೀಶ ಹಾಗು ಗಣೇಶ, ಮಧು, ರಮೇಶ್, ಭರತ್, ಜಗಣ್ಣ ಎಂಬುವವರು ಚಂದ್ರು ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆಂದರು.

ಚಂದ್ರು ಅವರ ಅಜ್ಜಿ ಜಯಲಕ್ಷ್ಮಮ್ಮ ಅವರಿಗೆ ಸೇರಿದ 1 ಎಕರೆ 30 ಗುಂಟೆ ಜಮೀನು ಅವರ ನಿಧನದ ಬಳಿಕ ಚಂದ್ರು ಅವರಿಗೆ ಮಂಜೂರಾಗಿದೆ. ಗುಡ್ಡದ ತೆರಣ್ಯ ಗ್ರಾಮದ ದ್ಯಾವಮ್ಮ ಅವರಿಗೆ ಸೇರಿದ್ದ 4 ಎಕರೆ ಜಮೀನನ್ನು ಬದುಕಿದ್ದಾಗಲೇ ಚಂದ್ರು ಅವರ ಹೆಂಡತಿ ಶೋಭಾಗೆ ವಿಲ್ ಬರೆದಿದ್ದರು. ಇತ್ತೀಚಿಗೆ ಕಾನೂನು ಬದ್ಧವಾಗಿ



ಖಾತೆ ಆಗಿದೆ ಎಂದು ವಿವರಿಸಿದರು.

ಈ ನಡುವೆ ಜಗದೀಶ ಅವರು ಕಂದಾಯ ಸಚಿವರ ಜನಸ್ಪಂದನ ಕಾರ್ಯಕ್ರಮದಲ್ಲಿ ದೂರು ನೀಡಿದ್ದರು. ಅದರಂತೆ ಉಪ ತಹಶೀಲ್ದಾರ್ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ನಡೆಸಿ, ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು ಹಾಗು ಗ್ರಾಮಸ್ಥರ ಸಮ್ಮುಖದಲ್ಲಿ ದಾಖಲೆ ಪರಿಶೀಲಿಸಿದ ನಂತರ ಯಾವುದೇ ಅಕ್ರಮ ಕಂಡುಬಂದಿಲ್ಲ ಎಂದು ತಹಶೀಲ್ದಾರ್ ವರದಿ ನೀಡಿ, ಚಂದ್ರು ಅವರ ಖಾತೆ ಕಾನೂನುಬದ್ಧವಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ ಎಂದರು.

ಉದ್ದೇಶಪೂರ್ವಕವಾಗಿ ಚಂದ್ರು ವಿರುದ್ಧ ಅಪಪ್ರಚಾರ ನಡೆಸಿ, ಮಾನಸಿಕ ಕಿರುಕುಳ ನೀಡಿ ಸಮಾಜದಲ್ಲಿ ಅವರ ಘನತೆಗೆ ಧಕ್ಕೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುವ ಪಕ್ಷ ಎಂದು ಹೇಳಿಕೊಳ್ಳುವ ಕೆಆರ್‌ಎಸ್ ಪಕ್ಷವೇ ದಲಿತ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ದೂರಿದರು.

ಅಲ್ಲದೆ ತೊಂದರೆ ನೀಡುತ್ತಿರುವವರ ವಿರುದ್ಧ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಮಾನನಷ್ಟ ಮೊಕದ್ದಮೆ ಹೂಡಿ, ರೌಡಿ ಶೀಟರ್ ಕೇಸ್ ತೆರೆಯುವಂತೆ ಆಗ್ರಹಿಸಿದರು.

ದಲಿತ ಮುಖಂಡರಾದ ನಾಗರಾಜು ಹೆತ್ತೂರು, ರಮೇಶ್, ಮಂಜು ತೇಜೂರು, ಹೆಚ್.ಜಿ. ಉಮೇಶ್, ರೈತ ಸಂಘದ ವಿಠಲ್, ನರಸಿನಕುಪ್ಪೆ ರಾಮು, ಅಶೋಕ್, ಚಂದ್ರು ಇದ್ದರು.

## ಕ್ಷುಲ್ಲಕ ಕಾರಣಕ್ಕೆ ಯುವಕನಿಗೆ ಚಾಕು ಇರಿತ

• ಪ್ರಜೋದಯ ವರದಿ



**ಬೇಲೂರು:** ಕ್ಷುಲ್ಲಕ ಕಾರಣಕ್ಕೆ ನಡೆದ ಮಾತಿನ ಚಕಮಕಿ ಮಾರಾಮಾರಿ ಹಂತಕ್ಕೆ ತಲುಪಿ ಯುವಕನಿಗೆ ಚಾಕುವಿನಿಂದ ಚುಚ್ಚಿ ಹಲ್ಲೆ ನಡೆಸಿದ ಘಟನೆ ಪಟ್ಟಣದ ಜೆ.ಪಿ. ನಗರ ಮುಖ್ಯರಸ್ತೆ ಬಳಿ ನಡೆದಿದೆ. ತೆಂಡೇಕೆರೆ ಗ್ರಾಮದ ದಿವಾಕರ್ ಗಾಯಾಳು. ಹಲ್ಲೆ ನಡೆಸಿದ ಆರೋಪದ ಮೇಲೆ ರಾಮೇನಹಳ್ಳಿ ಗ್ರಾಮದ ಭರತ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಮದುವೆ ಕಾರ್ಯಕ್ರಮ ಮುಗಿಸಿ ವಾಪಾಸ್ಸಾಗುತ್ತಿದ್ದ ವೇಳೆ ದಿವಾಕರ್ ಮತ್ತು ಭರತ್ ನಡುವೆ ಕ್ಷುಲ್ಲಕ ಕಾರಣಕ್ಕೆ ಮಾತಿನ ಚಕಮಕಿ ನಡೆದಿದೆ. ಬಳಿಕ ವಿಕೋಪಕ್ಕೆ ತಿರುಗಿ ಆರೋಪಿ ಭರತ್ ತನ್ನ ಬಳಿ ಇದ್ದ ಹರಿತವಾದ ಚಾಕುವಿನಿಂದ ದಿವಾಕರ್ ಮೇಲೆ ಹಲ್ಲೆ ಮಾಡಿದ್ದಾನೆ. ದಿವಾಕರ್ ತಲೆ ಹಾಗು ಕುತ್ತಿಗೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಸ್ಥಳೀಯರು ತಕ್ಷಣವೇ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಹಾಸನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಾಹಿತಿ ತಿಳಿದ ಇನ್ಸ್‌ಪೆಕ್ಟರ್ ರೇವಣ್ಣ ನೇತೃತ್ವದ ತಂಡ ಸ್ಥಳಕ್ಕೆ ಧಾವಿಸಿ, ಜೆ.ಪಿ.ನಗರದಲ್ಲಿ ಆರೋಪಿಯನ್ನು ಬಂಧಿಸಿದೆ. ಈ ಸಂಬಂಧ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಆರೋಪಿ ಭರತ್ ಹಿಂದೆಯೂ ಸಣ್ಣಪುಟ್ಟ ಗಲಾಟೆಗಳಲ್ಲಿ ಭಾಗಿಯಾಗಿದ್ದು, ಈತನ ವಿರುದ್ಧ ಈಗಾಗಲೇ ಹಲವು ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019